# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಅಕ್ಟೋಬರ್ 01, 2020

ಸಂಪುಟ : 47 ಸಂಚಿಕೆ : 142 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಕಲಿಯುವುದು ನಿಲ್ಲಿಸಿದರೆ ವರ್ಷದಲ್ಲೇ ಅರೆ ಜೀವ

### ದಾವಿವಿ ಘಟಿಕೋತ್ಸವದಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್



ದಾವಣಗೆರೆ, ಸೆ. 30 - ಕಲಿಕೆ ಎಂಬುದು ಕಾಲೇಜಿಗಷ್ಟೇ ಅಲ್ಲ, ಇಡೀ ಜೀವನಕ್ಕೆ ಬೇಕಿದೆ. ವೇಗವಾಗಿ ಬದಲಾ ಗುವ ತಂತ್ರಜ್ಞಾನದ ಕಾಲದಲ್ಲಿ ಕಲಿಕೆ ನಿಲ್ಲಿಸಿದರೆ ವರ್ಷದಲ್ಲೇ ಉದ್ಯೋಗ ಸಾಮರ್ಥ್ಯ ಕಳೆದುಕೊಳ್ಳುತ್ತೀರಿ ಎಂದು ಇಸ್ರೋ ಮಾಜಿ ಅಧ್ಯಕ್ಷ ಎ. ಎಸ್. ಕಿರಣ್ ಕುಮಾರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದ 7ನೇ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆನ್‌ಲೈನ್ ಮೂಲಕ ಮಾತನಾಡುತ್ತಿದ್ದ ಅವರು, 1950 ಹಾಗೂ 60ರ ದಶಕದಲ್ಲಿ ಕಾಲೇಜಿನಲ್ಲಿ ಕಲಿತಿದ್ದು ನಂತರ 15-20 ವರ್ಷಗಳವರೆಗೆ ಉದ್ಯೋಗಕ್ಕೆ ಉಪಯುಕ್ತವಾಗಿರುತ್ತಿತ್ತು ಎಂದು ಹೇಳಿದರು.

ಈಗ ತಂತ್ರಜ್ಞಾನ ವೇಗವಾಗಿ ಬದಲಾ ಗುತ್ತಿದೆ. ಕಾಲೇಜಿನ ಕಲಿಕೆ ನಂತರದ ಒಂದು ವರ್ಷಕ್ಕೂ ಪ್ರಸ್ತುತವಿರದು. ವಿಕಿರಣ ವಸ್ತುಗಳ ಆಯುಷ್ಯವನ್ನು ಹಾಫ್ ಲೈಫ್ (ಅರ್ಧ ಆಯಸ್ಸು) ಮೂಲಕ ಗುರುತಿಸಲಾ ಗುತ್ತದೆ. ಅದೇ ಭಾಷೆಯಲ್ಲಿ ಹೇಳುವು ದಾದರೆ, ಕಾಲೇಜು ಕಲಿಕೆಯ ಹಾಫ್ ಲೈಫ್ ವರ್ಷದವರೆಗೆ ಮಾತ್ರ ಎಂದು ತಿಳಿಸಿದರು.

ಈಗಾಗಲೇ ಕಲಿತಿರುವು ದನ್ನು ಕೈ ಬಿಟ್ಟು ಮರು ಕಲಿಕೆಗೆ ಮುಂದಾಗ ಬೇಕು. ಹೊಸ ಹೊಸ ವಿಷಯಗಳನ್ನು ಕಲಿಯುವ ಗುಣ ಬೆಳೆಸಿಕೊಳ್ಳಬೇಕು. ಸೃಜನಶೀಲ ಕಲಿಕೆಯ ಜೊತೆಗೆ, ಜ್ಞಾನಾರ್ಜನೆಯ ಪ್ರಕ್ರಿಯೆಯೂ ಅತಿ ಮುಖ್ಯ. ಇಲ್ಲವಾದರೆ ಕೆಲಸದಲ್ಲಿ ನೀವು ಅತಿ ವೇಗವಾಗಿ 'ಅರೆ ಜೀವ' ಆಗುತ್ತೀರಿ ಎಂದು ಎಚ್ಚರಿಸಿದರು.

**ಪ್ರತಿಭಾ ಪೀಳಿಗೆ :** ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಕುಶಲಿಗಳಾದ ಹಾಗೂ ಜ್ಞಾನ ಹೊಂದಿದ ಪೀಳಿಗೆಯ (2ನೇ ಪುಟಕ್ಕೆ)

### ಘಟಿಕೋತ್ಸವದ ದಿನದಂದೇ ಕುಲಪತಿ ಹಲಸೆಗೆ ಕೊರೊನಾ

ವಿ.ವಿ. ಕುಲಪತಿ ಪ್ರೊ. ಎಸ್.ವಿ. ಹಲಸೆ ಅವರು ಘಟಿಕೋತ್ಸವದ ದಿನವೇ ಕೊರೊನಾ ಸೋಂಕಿಗೆ ಒಳಗಾಗಿದ್ದಾರೆ.



ಕೊನೆ ಕ್ಷಣದವರೆಗೂ ಅವರು ಘಟಿಕೋತ್ಸವ ಸಿದ್ಧತೆಯಲ್ಲಿ ಭಾಗಿಯಾ ಗಿದ್ದರು. ಮಂಗಳವಾರವಷ್ಟೇ ಪತ್ರಿಕಾ ಗೋಷ್ಠಿಯಲ್ಲಿ ಘಟಿಕೋತ್ಸವದ ವಿವರ ಗಳನ್ನು ಹಂಚಿಕೊಂಡಿದ್ದರು. ಆದರೆ, ಬುಧವಾರ ಬೆಳಿಗ್ಗೆ ಅವರಿಗೆ ಕೊರೊನಾ ಸೋಂಕಿರುವುದು ಕಂಡು ಬಂದಿದೆ.

ಹಲಸೆ ಆನ್‌ಲೈನ್ ಮೂಲಕವೇ ಘಟಿಕೋತ್ಸವದ ಸ್ವಾಗತ ಭಾಷಣ ಮಾಡಿದರು. ಆನ್‌ಲೈನ್ ಮೂಲಕ ಭಾಷಣ ಮಾಡಿದ ಕುರಿತು ಪತ್ರಕರ್ತರು ದೂರವಾಣಿಯಲ್ಲಿ ಸಂಪರ್ಕಿಸಿದಾಗ ಅವರು, ಕೊರೊನಾ ಸೋಂಕು ದೃಢಪಟ್ಟ ಕಾರಣದಿಂದಾಗಿ ಸಮಾರಂಭದಿಂದ (2ನೇ ಪುಟಕ್ಕೆ)

### ವಿಜ್ಞಾನಿಯಿಂದ ಐಎಎಸ್‌ವರೆಗೆ ಪದಕ ವಿಜೇತರ ಕನಸು

ದಾವಣಗೆರೆ, ಸೆ. 30 - ವಿಜ್ಞಾನಿ ಯಾಗುವ ಕನಸು, ಉದ್ಯಮಿ ಯಾಗುವ ಲೆಕ್ಕಾಚಾರ, ಐಎಎಸ್ ಮಹತ್ವಾಕಾಂಕ್ಷೆ, ಉದ್ಯೋಗಿಯಾಗಿ ಮನೆಗೆ ನೆರವಾಗುವ ತವಕ, ಆದರ್ಶ ಶಿಕ್ಷಕಿಯಾಗುವ ಆಶಯ... ಹೀಗೆ ಹತ್ತು ಹಲವು ದಾರಿಗಳಲ್ಲಿ ಸಾಗುವ ಬಯಕೆಗಳನ್ನು ವ್ಯಕ್ತಪಡಿಸಿದವರು ದಾವಣಗೆರೆ ವಿಶ್ವವಿದ್ಯಾನಿಲಯದ ರ್‍ಯಾಂಕ್ ವಿಜೇತರು. ಮೈಕ್ರೋಬಯಾಲಜಿಯಲ್ಲಿ ಎಂ.ಎಸ್.ಸಿ. ಮೊದಲಿಗರಾಗಿರುವ ಎಂ. ಬಿ. ಪೊನ್ನಣ್ಣ ಅವರು ಬೆಂಗಳೂರಿನ ಅಂತೋರ್ನ್ ಬಯೋ ಸೈನ್ಸ್ ಕಂಪನಿಯಲ್ಲಿ ಕಿರಿಯ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿ ದ್ದಾರೆ. ನನ್ನ ತಂದೆ ಬೋಪಣ್ಣ ಕಾಫಿ ಪ್ಲಾಂಟೇಷನ್ ವ್ಯವಸ್ಥಾಪಕ. ಸ್ವಂತದ್ದು (2ನೇ ಪುಟಕ್ಕೆ)



### ಮೊದಲ ರ್‍ಯಾಂಕ್, ಮೂರು ಪದಕ, ಓದಿಗೆ ವಿದಾಯ

**ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಜಂಬುಲಿಂಗನಹಳ್ಳಿಯ ಜಿ.ವಿ. ಅಕ್ಷತ, ಬಿ.ಎ.ನಲ್ಲಿ ಮೊದಲ ರ್‍ಯಾಂಕ್ ಗಳಿಸಿ ಮೂರು ಪದಕ ಪಡೆದಿದ್ದರೂ ಓದಿಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ.**

**ದಾವಣಗೆರೆಯ ಎಂ.ಎಸ್.ಬಿ. ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದ ಅಕ್ಷತ, ಖಾಸಗಿ ಬಸ್ ಚಾಲಕ ವೆಂಕಟೇಶ್ ಹಾಗೂ ಅಂಗನವಾಡಿ ಶಿಕ್ಷಕಿ ವಿಜಯಲಕ್ಷ್ಮಿ ಪುತ್ರಿ.**

**ನಾಲ್ಕು ಮಕ್ಕಳಲ್ಲಿ ಮೊದಲನೆಯವಳೇ ನಾನು ಎಂದಿರುವ ಅಕ್ಷತ, ಕೆಎಎಸ್ ಪರೀಕ್ಷೆಯ ಗುರಿ ತಮಗಿದೆ. ಪ್ರಸಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಸಿದ್ಧತೆಯಲ್ಲಿರುವುದಾಗಿ ತಿಳಿಸಿದ್ದಾರೆ.**

**ಮನೆಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೆಲಸಕ್ಕೆ ಹೋಗಲು ನಿರ್ಧರಿಸಿರುವುದಾಗಿ ಇಂಗಿತ ವ್ಯಕ್ತಪಡಿಸಿರುವ ಅವರು, ಮುಂದಿನ ಓದಿಗಾಗಿ ಬೇರೆ ಯಾರ ನೆರವಿನ ಅಪೇಕ್ಷೆಯೂ ತಮಗಿಲ್ಲ ಎಂದು ಸ್ವಾಭಿಮಾನದಿಂದ ಹೇಳಿದ್ದಾರೆ.**

## ಶಾಲೆ ಬೀಗ ತೆರೆದ ಕೇಂದ್ರ

### ಅ.15ರಿಂದ ಅನ್‌ಲಾಕ್ 5.0; ಶಾಲೆ-ಚಿತ್ರಮಂದಿರಗಳ ಆರಂಭಕ್ಕೆ ಅನುಮತಿ

ನವದೆಹಲಿ, ಸೆ. 30 – ಕೇಂದ್ರ ಸರ್ಕಾರ ಅನ್‌ಲಾಕ್ 5.0 ಪ್ರಕಟಿಸಿದ್ದು, ಶಾಲೆಗಳ ಪುನರಾರಂಭಕ್ಕೆ ಅಕ್ಟೋಬರ್ 15ರಿಂದ ಅವಕಾಶ ಮಾಡಿಕೊಟ್ಟಿದೆ.

ಶಾಲೆಗಳು ಹಾಗೂ ಕೋಚಿಂಗ್ ಕೇಂದ್ರಗಳನ್ನು ತೆರೆಯಲು ರಾಜ್ಯ ಸರ್ಕಾರಗಳು ಅ.15ರ ನಂತರ ತಮ್ಮಲ್ಲಿನ ಪರಿಸ್ಥಿತಿಗಳನ್ನು ನೋಡಿಕೊಂಡು ನಿರ್ಧರಿಸಬಹುದಾಗಿದೆ ಎಂದು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆನ್‌ಲೈನ್ ಹಾಗೂ ದೂರ ಶಿಕ್ಷಣಕ್ಕೆ ಉತ್ತೇಜನ ನೀಡುವುದನ್ನು ಮುಂದುವರೆಸಬೇಕು. ನೇರ ಶಿಕ್ಷಣ ಆರಂಭಿಸಿದರೂ ಸಹ, ಕೆಲ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲೇ ಮುಂದುವರೆಯಲು ಬಯಸಿದರೆ ಅದಕ್ಕೆ ಅವಕಾಶ ನೀಡಬೇಕು ಎಂದು ತಿಳಿಸಲಾಗಿದೆ. ಪೋಷಕರ ಒಪ್ಪಿಗೆ ಪತ್ರದ ನಂತರವೇ ಮಕ್ಕಳು ಶಾಲೆಗೆ ಬರಬೇಕು. ಅಲ್ಲದೇ ಶಾಲೆಗಳಲ್ಲಿ ಹಾಜರಾತಿ ಕಡ್ಡಾಯಗೊಳಿಸಬಾರದು, ಶಾಲಾ ಹಾಜರಾತಿ ಪೋಷಕರ ವಿವೇಚನೆಗೆ ಬಿಡಬೇಕು ಎಂದು ತಿಳಿಸಲಾಗಿದೆ.

ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡುವ ಮಾರ್ಗಸೂಚಿಗಳ ಜೊತೆಗೆ, ರಾಜ್ಯಗಳು ತಮ್ಮದೇ ಆದ ಮಾರ್ಗಸೂಚಿ ಹೊಂದಬಹುದಾಗಿದೆ.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಉನ್ನತ ಶಿಕ್ಷಣ ಇಲಾಖೆಯು ನಿರ್ಧಾರ ತೆಗೆದುಕೊಳ್ಳಲಿದೆ. ಆದರೆ, ಪಿ. ಹೆಚ್.ಡಿ. ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು ಅ.15ರಿಂದ ಪ್ರಯೋಗಾಲಯದ ಕೆಲಸಗಳಿಗಾಗಿ ಕಾಲೇಜುಗಳಿಗೆ ಬರಬಹುದಾಗಿದೆ.

**ಚಿತ್ರ ಪ್ರದರ್ಶನಕ್ಕೆ ಅನುಮತಿ :** ಚಿತ್ರಮಂದಿರಗಳ ಪುನರಾರಂಭದ ಬೇಡಿಕೆಗೆ ಸ್ಪಂದಿಸಿರುವ ಕೇಂದ್ರ ಸರ್ಕಾರ, ಅ.15ರಿಂದ ಸಿನೆಮಾ ಹಾಗೂ ಮಲ್ಟಿಪ್ಲೆಕ್ಸ್‌ಗಳನ್ನು ತೆರೆಯಲು ಅನುಮತಿ ನೀಡಿದೆ. ಆದರೆ, ಒಟ್ಟು ಸೀಟುಗಳ ಶೇ.50ರಷ್ಟು ಮಾತ್ರ ಭರ್ತಿ ಮಾಡಬೇಕಿದೆ.

ಕ್ರೀಡಾಪಟುಗಳಿಗೆ ತರಬೇತಿ ನೀಡುವ ಈಜುಕೊಳಗಳನ್ನು ಅಕ್ಟೋಬರ್ 15ರಿಂದ ಆರಂಭಿಸಲೂ ಸಹ ಅವಕಾಶ ನೀಡಲಾಗಿದೆ.


ಮನರಂಜನಾ ಪಾರ್ಕ್ ಮತ್ತಿತರರ ಸ್ಥಳಗಳ ಆರಂಭಕ್ಕೂ ಅ.15ರ ನಂತರ ಅವಕಾಶ ಇರಲಿದೆ. ಉದ್ಯಮಗಳ ಪ್ರದರ್ಶನಕ್ಕೂ ಅವಕಾಶ ನೀಡಲಾಗಿದೆ.

ಸಾಮಾಜಿಕ, ಶೈಕ್ಷಣಿಕ, ಕ್ರೀಡೆ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಸಮಾರಂಭಗಳಲ್ಲಿ 100ಕ್ಕೂ ಹೆಚ್ಚು ಜನರು ಪಾಲ್ಗೊಳ್ಳಲು ಅವಕಾಶ (2ನೇ ಪುಟಕ್ಕೆ)

## ಬಾಬರಿ ಧ್ವಂಸ ತೀರ್ಪು ಗೆದ್ದ ಭೀಷ್ಮ ಪಡೆ

### ಅದ್ವಾನಿ, ಜೋಷಿ, ಉಮಾ ಭಾರತಿ ಸೇರಿ 32 ಆರೋಪಿಗಳು ನಿರ್ದೋಷಿಗಳು

ಲಖ್ನೌ, ಸೆ. 30 – ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಸಿಲುಕಿದ್ದ ಬಿಜೆಪಿ ಹಿರಿಯ ನಾಯಕರಾದ ಎಲ್.ಕೆ.ಅದ್ವಾನಿ, ಮುರಳಿ ಮನೋಹರ ಜೋಷಿ ಹಾಗೂ ಉಮಾ ಭಾರತಿ ಸೇರಿದಂತೆ ಎಲ್ಲಾ 32 ಆರೋಪಿಗಳು ನಿರ್ದೋಷಿಗಳು ಎಂದು ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ. ರಾಮ ಜನ್ಮಭೂಮಿ ಸ್ಥಳದಲ್ಲಿದ್ದ ಬಾಬ್ರಿ ಮಸೀದಿ ಧ್ವಂಸವಾದ 28 ವರ್ಷಗಳ ನಂತರ ತೀರ್ಪು ಪ್ರಕಟವಾಗಿದೆ.



ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪಿಗೆ ಜೈ ಶ್ರೀರಾಮ್ ಎಂದ ಬಿಜೆಪಿ ಹಿರಿಯ ನಾಯಕ ಅದ್ವಾನಿ

2,300 ಪುಟಗಳ ತೀರ್ಪು ನೀಡಿರುವ ನ್ಯಾಯಾಲಯ, 32 ಆರೋಪಿಗಳು ಬಾಬ್ರಿ ಮಸೀದಿ ಧ್ವಂಸದ ಸಂಚಿನಲ್ಲಿ ಭಾಗಿಯಾಗಿದ್ದಾರೆ ಎಂಬ ಬಗ್ಗೆ ಯಾವುದೇ ಸ್ಪಷ್ಟ ಸಾಕ್ಷಿಗಳಿಲ್ಲ ಎಂದು ತಿಳಿಸಿದೆ.

ನಿವೃತ್ತರಾಗುವ ದಿನದಂದು ತೀರ್ಪು ನೀಡಿರುವ ವಿಶೇಷ ನ್ಯಾಯಮೂರ್ತಿ ಎಸ್. ಕೆ. ಯಾದವ್, ಪತ್ರಿಕೆಗಳ ವರದಿಗಳು ಹಾಗೂ ವಿಡಿಯೋ ಕ್ಯಾಸೆಟ್‌ಗಳನ್ನು ಸಾಕ್ಷಿಗಳಾಗಿ ಪರಿಗಣಿಸಲು ನಿರಾಕರಿಸಿದ್ದಾರೆ.

ರಾಮ ದೇವರ ಪ್ರತಿಮೆಗಳು ಬಾಬ್ರಿ ಮಸೀದಿಯ ಒಳಗೆ ಇದ್ದ ಕಾರಣ ಅದನ್ನು ರಕ್ಷಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ದಿವಂಗತ ನಾಯಕ ಅಶೋಕ್ ಸಿಂಘಾಲ್ ಬಯಸಿದ್ದರು ಎಂದೂ ನ್ಯಾಯಾಲಯ ತೀರ್ಪಿನಲ್ಲಿ ಹೇಳಿದೆ.

ನ್ಯಾಯಾಲಯ ತೀರ್ಪು ಪ್ರಕಟಿಸಿದಾಗ 26 ಆರೋಪಿಗಳು ಉಪಸ್ಥಿತರಿದ್ದರು. ಖುದ್ದು ಹಾಜರಿಯಿಂದ ವಿನಾಯಿತಿ ನೀಡುವಂತೆ ಮಾಜಿ ಉಪ ಪ್ರಧಾನ ಮಂತ್ರಿ ಎಲ್.ಕೆ.ಅದ್ವಾನಿ, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್, ಮಾಜಿ ಕೇಂದ್ರ ಸಚಿವರಾದ ಮುರಳಿ ಮನೋಹರ ಜೋಷಿ ಹಾಗೂ ಉಮಾ ಭಾರತಿ, ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಅಧ್ಯಕ್ಷ ನೃತ್ಯ ಗೋಪಾಲ ದಾಸ್ ಹಾಗೂ ಶಿವ ಸೇನಾ ನಾಯಕ ಸತೀಶ್ ಪ್ರಧಾನ್ ಮನವಿ ಮಾಡಿಕೊಂಡಿದ್ದರು. (2ನೇ ಪುಟಕ್ಕೆ)

## ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ಅ. 28ರಂದು ಚುನಾವಣೆ

ದಾವಣಗೆರೆ, ಸೆ.30- ಕರ್ನಾಟಕ ವಿಧಾನ ಪರಿಷತ್ತಿನ ಆಗ್ನೇಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ ಸಂಬಂಧ ವೇಳಾಪಟ್ಟಿಯನ್ನು ಚುನಾವಣಾಧಿಕಾರಿಯೂ ಆಗಿರುವ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಪ್ರಕಟಿಸಿದ್ದಾರೆ.

ಈ ಕ್ಷೇತ್ರವು ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳು ಮತ್ತು ದಾವಣಗೆರೆ ಜಿಲ್ಲೆಯ ಹರಿಹರ, ದಾವಣಗೆರೆ, ಜಗಳೂರು ತಾಲ್ಲೂಕು ಗಳ ವ್ಯಾಪ್ತಿಯನ್ನೊಳಗೊಂಡಿದೆ.

ಚುನಾವಣೆ ಸಂಬಂಧ ನಾಳೆ ದಿನಾಂಕ 1ರಂದು (2ನೇ ಪುಟಕ್ಕೆ)

## ಮಸೀದಿ ತೆರವಿನ ಅರ್ಜಿ ತಿರಸ್ಕೃತ

ಮಥುರ, ಸೆ. 30 – ಶ್ರೀ ಕೃಷ್ಣ ದೇವರ ಜನ್ಮಸ್ಥಳದ ಸಮೀಪ ಇರುವ ಮಸೀದಿಯನ್ನು ತೆರವುಗೊಳಿಸಬೇಕೆಂದು ದಾಖಲಿಸಲಾಗಿದ್ದ ಅರ್ಜಿಯನ್ನು ಮಥುರಾ ನ್ಯಾಯಾಲಯ ಬುಧವಾರ ತಳ್ಳಿ ಹಾಕಿದೆ.

**ಮಥುರ**

ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಉನ್ನತ ನ್ಯಾಯಾಲಯದ ಮೊರೆ ಹೋಗುವುದಾಗಿ ಅರ್ಜಿ ದಾರರ ಪರ ವಕೀಲ ಹರಿ ಶಂಕರ್ ಜೈನ್ ತಿಳಿಸಿದ್ದಾರೆ. (2ನೇ ಪುಟಕ್ಕೆ)


## ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಆರ್.ಟಿ.ಓ. ಕಚೇರಿ ಸಿಬ್ಬಂದಿಯಾದ **ಶ್ರೀ ಎನ್. ಜಗದೀಶ್** ಮತ್ತು ಬಿಎಸ್‌ಎನ್‌ಎಲ್ ನಿವೃತ್ತ (VRS) ನೌಕರರಾದ **ಶ್ರೀಮತಿ ಸುಲೋಚನ** ಅವರ ಪುತ್ರ **ವಿನಯ್ ಜೆ.** ಇವರು 2019-20ನೇ ಸಾಲಿನ ಎಂಎಸ್ಸಿ, ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ **ದಾವಣಗೆರೆ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಎರಡು ಚಿನ್ನದ ಪದಕ** ಪಡೆದಿರುತ್ತಾರೆ. ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.

**ಆರ್.ಟಿ.ಓ. ಕಚೇರಿ ಸಿಬ್ಬಂದಿ ಮತ್ತು ಸ್ನೇಹಿತರು**

## ಶರಣ ಶ್ರೀ ಹೆಚ್.ಎಸ್. ಸಿದ್ದಯ್ಯನವರು ನಿಧನ (ಹೆಚ್.ಎಸ್. ಎಸ್.)



ದಾವಣಗೆರೆ ತರಳಬಾಳು ಬಡಾವಣೆ (ವಿದ್ಯಾನಗರ) ವಾಸಿಯಾದ

**ಶ್ರೀ ಹೆಚ್.ಎಸ್. ಸಿದ್ದಯ್ಯನವರು**

(ಹೊಳಲ್ಕೆರೆ) ನಿವೃತ್ತ ಮುಖ್ಯ ಶಿಕ್ಷಕರು

ಇವರು ದಿನಾಂಕ 30.09.2020ರ ಬುಧವಾರ ಮಧ್ಯಾಹ್ನ 1.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು. ಪತ್ನಿ, ಪುತ್ರ, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.09.2020ರ ಬುಧವಾರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ ವರ್ಗ

**ಪತ್ನಿ : ಶ್ರೀಮತಿ ಶಾರದಮ್ಮ, ಮಗ : ಚಂದ್ರಶೇಖರ್**

**ಸೊಸೆ: ಜಯಂತಿ ಚಂದ್ರಶೇಖರ್, ಮೊಮ್ಮಗ: ಶ್ರೇಯಸ್ ಹೆಚ್.ಸಿ.**




# ವಿಜ್ಞಾನಿಯಿಂದ ಐಎಎಸ್‌ವರೆಗೆ ಪದಕ ವಿಜೇತರ ಕನಸು







**(1ನೇ ಪುಟದಿಂದ)** 15 ಎಕರೆ ಜಮೀನಿದೆ. ವಿಜ್ಞಾನಿಯಾಗಿ ಸಾಧನೆ ಮಾಡಿ ಸ್ವಂತ ಕಾಲ ಮೇಲೆ ನಿಲ್ಲಬೇಕು ಎಂಬುದು ನನ್ನ ಚಿಕ್ಕಂದಿನ ಕನಸು ಎಂದವರು ತಿಳಿಸಿದ್ದಾರೆ.

ಮಂಡ್ಯದ ಬನಹಳ್ಳಿ ಗ್ರಾಮದ ಬಿ. ಎಸ್. ಅನಿಲ್ ಕುಮಾರ್, ಎಂ.ಬಿ.ಎ.ದಲ್ಲಿ ಪದಕ ಪಡೆದಿದ್ದಾರೆ. ಕೃಷಿ ಹಿನ್ನೆಲೆಯ ಕುಮಾರ್, ತನಗೆ ಬಡತನವೇ ಸ್ಫೂರ್ತಿಯಾಗಿತ್ತು ಎಂದಿದ್ದಾರೆ.

ಪುಸ್ತಕಗಳನ್ನು ಉರು ಹೊಡೆದು ಉತ್ತರಿಸುವುದೆಂದರೆ ಅಲರ್ಜಿ. ಸ್ವಂತಿಕೆಯ ಉತ್ತರ ಬರೆಯುವುದನ್ನು ಪಿ.ಯು. ನಂತರದಿಂದ ಅಭ್ಯಾಸ ಮಾಡಿಕೊಂಡಿದ್ದೆ. ಈ ಅಭ್ಯಾಸ ಬಿ.ಕಾಂನಲ್ಲಿ ಹಿನ್ನಡೆಗೆ ಕಾರಣವಾಗಿತ್ತು. ಆದರೂ, ಸ್ವಂತಿಕೆಯ ಉತ್ತರಗಳಿಂದ ಉನ್ನತ ಹಂತದಲ್ಲಿ ಸಾಧನೆ ಮಾಡಿರುವುದು ಸಾರ್ಥಕತೆಯ ಭಾವ ತಂದಿದೆ. ಈಗ ನಾನು ಐಎಎಸ್ ಪರೀಕ್ಷೆಯ ಸಿದ್ಧತೆಯಲ್ಲಿದ್ದೇನೆ ಎಂದಿದ್ದಾರೆ. ಎರಡು ವರ್ಷ ಉತ್ಕಟತೆಯಿಂದ ಅಧ್ಯಯನ ಮಾಡಿದ್ದಕ್ಕೆ ಎಂ.ಎಸ್‌ಸಿಯ ಆಹಾರ ತಂತ್ರಜ್ಞಾನ ವಿಭಾಗದಲ್ಲಿ ಮೊದಲ ಸ್ಥಾನ ಪಡೆಯಲು ಸಾಧ್ಯವಾಗಿದೆ ಎಂದು ಹೇಳುವ ಎಸ್. ಎಂ. ಲೇಖನ, ಮುಂದಿನ ದಿನಗಳಲ್ಲಿ ಸ್ವಂತ ಉದ್ಯಮ ಆರಂಭಿಸುತ್ತೇನೆ ಎಂದು ತಮ್ಮ ಕನಸು ಹಂಚಿಕೊಂಡಿದ್ದಾರೆ.

ಬೆಂಗಳೂರಿನ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರ ಮೃತ್ಯುಂಜಯ ಪುತ್ರಿಯಾಗಿರುವ ಇವರು, ಆಹಾರ ಸಂಸ್ಕರಣಾ ಘಟಕಕ್ಕೆ ಪೂರಕವಾಗಿ ಈ ಅಧ್ಯಯನ ಮಾಡಿದ್ದೇನೆ. ಮಹಿಳೆಯರೂ ಉದ್ಯಮಿಗಳಾಗಬಹುದು, ಮೇಕ್ ಇನ್ ಇಂಡಿಯಾ ಅಭಿಯಾನದ ಭಾಗವಾಗಬಹುದು. ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಮ್ದಾರ್ ಅಂಥವರು ತಮಗೆ ಸ್ಫೂರ್ತಿ ಎಂದು ತಿಳಿಸಿದ್ದಾರೆ.

ಮೊದಲು ಬಿಎಸ್‌ಸಿ ಓದಿ ನಂತರ ಎಂ.ಬಿ.ಎ.ಗೆ ಜಿಗಿದರೂ ಹ್ಯೂಮನ್ ರಿಸೋರ್ಸ್ ವಿಭಾಗದಲ್ಲಿ ಮೊದಲ ರ‍್ಯಾಂಕ್ ಪಡೆದ ಹೆಗ್ಗಳಿಕೆ ಕೆ.ಎನ್. ಅಕ್ಷತ ಅವರದ್ದು.

ಬಳ್ಳಾರಿ ಜಿಲ್ಲೆಯ ಕೋಗಳಿಯ ರೈತ ಕುಟುಂಬದ ಹಿನ್ನೆಲೆಯ ಅಕ್ಷತ, ಮೊದಲ ಬಿಎಸ್‌ಸಿ ಮಾಡಿ, ನಂತರದಲ್ಲಿ ಎಂ.ಬಿ.ಎ.ಗೆ ಸೇರಿದ್ದರು. ಮೊದಲ ಎರಡು ಸೆಮಿಸ್ಟರ್‌ಗಳಲ್ಲಿ ಕಷ್ಟವಾಯಿತು. ಮೂರನೇ ಸೆಮಿಸ್ಟರ್‌ನಿಂದ ವಿಷಯ ಹಿಡಿತಕ್ಕೆ ಸಿಕ್ಕಿತು ಎಂದವರು ಹೇಳಿದ್ದಾರೆ.

ಪತ್ರಿಕೋದ್ಯಮ ಎಂ.ಎ.ದಲ್ಲಿ ಮೊದಲ ರ‍್ಯಾಂಕ್ ಗಳಿಸಿರುವ ಕೆ.ಎಂ. ನಂದಿನಿ ಅವರು, ಮುಂದಿನ ದಿನಗಳಲ್ಲಿ ನಾಗರಿಕ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜನ ಸೇವೆ ಮಾಡುವ ಗುರಿ ಹೊಂದಿರುವುದಾಗಿ ತಿಳಿಸಿದ್ದಾರೆ.

ಕನ್ನಡ ಎಂ.ಎ.ದಲ್ಲಿ ನಾಲ್ಕು ಪದಕ ಪಡೆದ ನಗರದ ನಿಟುವಳ್ಳಿಯ ಕೆ.ವಿ. ವಿನಯವತಿ ಮಾತನಾಡಿ, ರ‍್ಯಾಂಕ್ ಬರುವ ನಿರೀಕ್ಷೆ ಇತ್ತು. ಆದರೆ, ನಾಲ್ಕು ಪದಕ ಸಿಗುವುದು ಸಂತೋಷ ತಂದಿದೆ. ಮುಂದೆ ಜನಪದ ಸಾಹಿತ್ಯವನ್ನು ಲಿಖಿತ ರೂಪಕ್ಕೆ ತರುವ ಹಾಗೂ ಪಿ.ಹೆಚ್.ಡಿ. ಮಾಡುವ ಉದ್ದೇಶವಿದೆ ಎಂದರು.

## ಗಂಡ್ ಮಕ್ಳೂ ಸ್ಪ್ರಾಂಗು, ಆದರೂ...

ಕಲಿಕೆಯ ಸಾಮರ್ಥ್ಯದಲ್ಲಿ ಹೆಣ್ಣು ಮಕ್ಕಳಂತೆ ಗಂಡು ಮಕ್ಕಳೂ ಸಮರ್ಥರಿದ್ದಾರೆ. ಆದರೆ, ಸಾಮರ್ಥ್ಯದ ಪೂರ್ಣ ಬಳಕೆ ಮಾಡಿಕೊಳ್ಳದೇ ಕಲಿಕೆಯಲ್ಲಿ ಹಿಂದೆ ಬೀಳುತ್ತಿದ್ದಾರೆ ಎಂಬ ಅಭಿಪ್ರಾಯ ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳಿಂದ ಕೇಳಿ ಬಂತು.

ಗಂಡು ಮಕ್ಕಳ ಕಲಿಕಾ ಸಾಮರ್ಥ್ಯ ಹೆಣ್ಣು ಮಕ್ಕಳಿಗಿಂತ ಕಡಿಮೆ ಇಲ್ಲ ಎಂಬುದು ವೈಜ್ಞಾನಿಕವಾಗಿಯೇ ಸಾಬೀತಾಗಿದೆ. ಆದರೆ, ಅದನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ ಎಂದು ಎಂ.ಎಸ್.ಸಿ. ಮೈಕ್ರೋಬಯಾಲಜಿಯಲ್ಲಿ ಮೊದಲಿಗರಾಗಿರುವ ಎಂ.ಬಿ. ಪೊನ್ನಣ್ಣ ತಿಳಿಸಿದ್ದಾರೆ.

ಮೈಕ್ರೋಬಯಾಲಜಿಯಲ್ಲಿ ಸದಾ ವಿದ್ಯಾರ್ಥಿನಿಯರೇ ಮೊದಲಿಗರು. ಮೊದಲ ಬಾರಿಗೆ ಹುಡುಗನೊಬ್ಬನಿಗೆ ಮೊದಲ ಸ್ಥಾನ ಒದಗಿಸಿದ ಸಾಧನೆ ತನ್ನದು ಎಂದು ಪೊನ್ನಣ್ಣ ಹೇಳಿದ್ದಾರೆ.

ಓದಿನ ಬಗ್ಗೆ ಗಂಭೀರತೆಯ ಕೊರತೆ ಇರುವುದು ವಿದ್ಯಾರ್ಥಿಗಳಲ್ಲಿ ಕಂಡು ಬರುತ್ತದೆ ಎಂದು ಎಂ. ಎಸ್‌ಸಿ ಭೌತಶಾಸ್ತ್ರದಲ್ಲಿ ಮೊದಲ ರ‍್ಯಾಂಕ್ ಪಡೆದ ಮೊಹಮ್ಮದ್ ಜಬೀವುಲ್ಲಾ ಹೇಳಿದ್ದಾರೆ. ತಮ್ಮ ಕ್ಲಾಸ್‌ನಲ್ಲೂ ಹುಡುಗಿಯರ ಸಂಖ್ಯೆ ಹುಡುಗರಿಗಿಂತ ಎರಡು ಪಟ್ಟು ಹೆಚ್ಚಿತ್ತು. ಆದರೆ, ಬಿಎಸ್‌ಸಿಯಲ್ಲಿ ಮೂರನೇ ರಾಂಕ್‌ನಲ್ಲಿದ್ದ ನಾನು, ಮೊದಲ ರ‍್ಯಾಂಕ್ ಪಡೆಯಬೇಕೆಂಬ ಛಲದಿಂದ ಓದಿದ್ದು ಮೊದಲ ಸ್ಥಾನಕ್ಕೆ ಸಹಕಾರಿಯಾಯಿತು ಎನ್ನುತ್ತಾರೆ.

ಸ್ನಾತಕ ಪದವಿಯಲ್ಲಿ ಸ್ವರ್ಣ ಪದಕ ಪಡೆದ ಗಂಡು ಮಕ್ಕಳ ಸಂಖ್ಯೆ ಕೇವಲ ಒಂದಾದರೆ, ಹೆಣ್ಣು ಮಕ್ಕಳದು 8. ಸ್ನಾತಕೋತ್ತರದಲ್ಲಿ ಕೇವಲ ಐವರು ಗಂಡು ಮಕ್ಕಳು ಪದಕ ಪಡೆದರೆ, ಹೆಣ್ಣು ಮಕ್ಕಳು 19 ಪಡೆದಿದ್ದಾರೆ. ಇದು ಗಂಡು ಮಕ್ಕಳ ಸಾಗುವ ಹಾದಿ ದೂರ ಇರುವ ಜೊತೆಗೆ ಸವಾಲನ್ನೂ ತೋರಿಸುತ್ತಿದೆ.

# ಕಲಿಯುವುದು ನಿಲ್ಲಿಸಿದರೆ ವರ್ಷದಲ್ಲೇ ಅರೆ ಜೀವ

**(1ನೇ ಪುಟದಿಂದ)** ಅಗತ್ಯ ಭಾರತಕ್ಕಿದೆ. ಈ ಪೀಳಿಗೆ ಬದಲಾದ ಪರಿಸ್ಥಿತಿಯನ್ನು ಗ್ರಹಿಸಿ, ಸುಸ್ಥಿರ ಬೆಳವಣಿಗೆಗೆ ಅಗತ್ಯ ಅಂಶಗಳನ್ನು ಅಳವಡಿಸಿಕೊಳ್ಳಬೇಕಿದೆ.

ವಿದ್ಯಾರ್ಥಿಗಳು ಹಳೆಯ ದಾರಿಯಲ್ಲಿ ಹೆಜ್ಜೆ ಹಾಕದೇ, ತಮ್ಮದೇ ಆದ ಹೊಸ ಪಥವನ್ನು ವೇಗವಾಗಿ ರೂಪಿಸಿಕೊಳ್ಳಬೇಕು. ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳುವಂತಾಗಬೇಕು. ಜವಾಬ್ದಾರಿ ಯುತವಾಗಿ ವೈಜ್ಞಾನಿಕ ಸಾಮರ್ಥ್ಯ ಬಳಸಿ ಕೊಳ್ಳಬೇಕು ಎಂದವರು ತಿಳಿಸಿದರು.

**ಕೊರೊನಾ ತಂತ್ರಜ್ಞಾನ** : ಕೋವಿಡ್ -19 ನಿರ್ವಹಣೆಯಲ್ಲಿ ಮುಂಚೂಣಿ ತಂತ್ರಜ್ಞಾನ ಮಹತ್ವಪೂರ್ಣವಾಗಿ ನೆರವಾಗಿದೆ. ಕೊರೊನಾ ಸಂದರ್ಭದಲ್ಲಿ ಕೇವಲ ಆರೋಗ್ಯವಷ್ಟೇ ಅಲ್ಲದೇ, ದೈನಂದಿನ ಜೀವನಕ್ಕೂ ತಂತ್ರಜ್ಞಾನ ನೆರವಾಗಿದೆ ಎಂದರು.

ನಾನು ಈಗ ಆನ್‌ಲೈನ್ ಮೂಲಕ ಮಾತನಾಡುತ್ತಿರುವುದೂ ಸಹ ಕೊರೊನಾ ಪರಿಣಾಮವನ್ನು ಹಾಗೂ ತಂತ್ರಜ್ಞಾನದ ಉಪಯುಕ್ತತೆಯನ್ನು ತೋರಿಸುತ್ತಿದೆ ಎಂದು ಕಿರಣ್ ಕುಮಾರ್ ಹೇಳಿದರು.

ಜಗತ್ತಿನಾದ್ಯಂತ ಕೊರೊನಾ ಹರಡುತ್ತಿರುವಂತೆಯೇ ತಂತ್ರಜ್ಞಾನ ಪರಿಹಾರ ಗಳು, ಸೋಂಕು ನಿಗಾ ಹಾಗೂ ನಿಯಂತ್ರ ಣಕ್ಕೆ ನೆರವಾಗಿವೆ. ಇದರಿಂದಾಗಿ ಆರೋಗ್ಯ ವ್ಯವಸ್ಥೆ ಮೇಲಿನ ಹೊರೆ ಹಾಗೂ ಆರೋಗ್ಯ ವೃತ್ತಿಪರರ ಕಾರ್ಯ ನಿರ್ವಹಣೆಯ ಭಾರ ಕಡಿಮೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಎಸ್.ವಿ. ಹಲಸೆ, ವಿಶ್ವವಿದ್ಯಾನಿಲಯವು ನ್ಯಾಕ್ ಮಾನ್ಯತಾ ಶ್ರೇಣಿಯಿಂದ ಬಿ ಶ್ರೇಣಿ ಪಡೆದಿದೆ. ಮಾಹಿತಿ ತಂತ್ರಜ್ಞಾನದ ಕೆಲಸಗಳನ್ನು ಜಾರಿಗೊಳಿಸಿರುವುದಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ ಗಳಿಸಿದೆ ಎಂದು ತಿಳಿಸಿದರು.

ಪ್ರಚಾರೋಪನ್ಯಾಸ ಮಾಲೆಯಡಿ 101 ಪುಸ್ತಕಗಳ ಪ್ರಕಟಣೆಗೆ ಬಿರುಸಿನ ಸಿದ್ಧತೆ ನಡೆದಿದೆ. ಬಹು ವರ್ಷಗಳ ಬೇಡಿಕೆಯಂತೆ 125 ಉನ್ನತ ಅಧ್ಯಾಪಕರ ನೇಮಕಾತಿ ಈ ವರ್ಷ ಮಾಡಲಾಗಿದೆ ಎಂದು ಹೇಳಿದರು.

ಕಿರಣ್ ಕುಮಾರ್ ಹಾಗೂ ಹಲಸೆ ಅವರು ಆನ್‌ಲೈನ್ ಮೂಲಕ ಮಾತನಾಡಿದರು. ಈ ಹಿನ್ನೆಲೆಯಲ್ಲಿ ಪರೀಕ್ಷಾಂಗ ಕುಲಸಚಿವೆ ಪ್ರೊ.ಹೆಚ್.ಎಸ್. ಅನಿತ ಮತ್ತು ಹಣಕಾಸು ಅಧಿಕಾರಿ ಪ್ರೊ.ಗೋಪಾಲ ಎಂ. ಅಡವಿರಾವ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಕುಲಸಚಿವ ಡಾ. ಬಸವರಾಜ ಬಣಕಾರ, ವಿವಿಧ ವಿಭಾಗಗಳ ಡೀನ್‌ಗಳು ಹಾಗೂ ಸಿಂಡಿಕೇಟ್ ಸದಸ್ಯರು ಉಪಸ್ಥಿತರಿದ್ದರು.

## ಪದಕಗಳು ನನ್ನವಲ್ಲ ಎಂದ ಸಾಧಕಿ

ಬಿಎಡ್‌ನಲ್ಲಿ ಪ್ರಥಮ ರ‍್ಯಾಂಕ್ ಪಡೆದು, ಎರಡು ಪದಕ ಗಳಿಸಿರುವ ಹರಿಹರದ ಶ್ರೀಶೈಲ ಶೈಕ್ಷಣಿಕ ಮಹಾವಿದ್ಯಾಲಯದ ಉಮಾಮಹೇಶ್ವರಿ ಆರ್. ಕೊಳ್ಳೇರ ಅವರು, ಈ ಪದಕಗಳು ತಮ್ಮವಲ್ಲ ಎಂದು ಸ್ಪಷ್ಟವಾಗಿ ಹೇಳಿದರು!

ಕಾರಣವೇನೆಂದರೆ ಅವರು ಪ್ಯಾರಾಮೆಡಿಕ್ ಆಗಲು ಬಯಸಿದ್ದರು. ರಾಣೇಬೆನ್ನೂರಿನ ಎಡಿಹಾಳಿನಲ್ಲಿ ಶಿಕ್ಷಕರಾಗಿರುವ ತಂದೆ ರಾಮಪ್ಪ ಮಗಳು ಶಿಕ್ಷಕಿಯಾಗಲಿ ಎಂದು ಬಲವಂತದಿಂದ ಬಿಎಡ್‌ಗೆ ಸೇರಿಸಿದರು.

ಇಷ್ಟವಿಲ್ಲದಿದ್ದರೂ ಕಷ್ಟಪಟ್ಟು ಓದಿ ಮೊದಲ ರ‍್ಯಾಂಕ್ ಗಳಿಸಿದ ಪದಕಗಳನ್ನು ಕೈಯಲ್ಲಿಟ್ಟುಕೊಂಡಿದ್ದ ಉಮಾಮಹೇಶ್ವರಿ, ಇವು ನನ್ನವಲ್ಲ. ನನ್ನ ಅಪ್ಪನವು ಎಂದು ತಿಳಿಸಿದರು.

ಪ್ರಸಕ್ತ ಬಳ್ಳಾರಿ ಜಿಲ್ಲೆಯ ಹೊಳಲಿನಲ್ಲಿ ಶಿಕ್ಷಕಿಯಾಗಿರುವ ಅವರು, ಪ್ಯಾರಾಮೆಡಿಕ್ ಆಗದಿದ್ದರೂ ಆದರ್ಶ ಶಿಕ್ಷಕಿಯಾಗುತ್ತೇನೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಕುಲಪತಿ ಹಲಸೆಗೆ ಕೊರೊನಾ

**(1ನೇ ಪುಟದಿಂದ)** ದೂರವಿರಬೇಕಾಯಿತು ಎಂದು ಸ್ಪಷ್ಟಪಡಿಸಿದರು. ಘಟಿಕೋತ್ಸವದ ಮುಖ್ಯ ಅತಿಥಿಯಾದ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಅವರೂ ಸಹ ಆನ್‌ಲೈನ್ ಮೂಲಕವೇ ತಮ್ಮ ಭಾಷಣ ಮಾಡಿದರು.

ಘಟಿಕೋತ್ಸವಕ್ಕೆ ರಾಜ್ಯಪಾಲ ವಜುಭಾಯಿ ರುಡಾಭಾಯಿ ವಾಲಾ, ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದ ಕಲಬುರಗಿಯ ಶರಣಬಸವೇಶ್ವರ ಅಪ್ಪ ಶೈಕ್ಷಣಿಕ ಸಂಸ್ಥೆಗಳ ಅಧ್ಯಕ್ಷರಾದ ದಾಕ್ಷಾಯಣಿ ಅಪ್ಪ ಅವರು ಗೈರಾಗಿದ್ದರು. ಕೊರೊನಾ ಹಿನ್ನೆಲೆಯಲ್ಲಿ ಪದಕ ಹಾಗೂ ರ‍್ಯಾಂಕ್ ವಿಜೇತರು ಸೇರಿದಂತೆ ಸೀಮಿತವಾಗಿ ಘಟಿಕೋತ್ಸವಕ್ಕೆ ಆಹ್ವಾನ ನೀಡಲಾಗಿತ್ತು. ಹೀಗಾಗಿ ವಾಡಿಕೆಗಿಂತ ವಿದ್ಯಾರ್ಥಿಗಳ ಸಂಖ್ಯೆ ಸಾಕಷ್ಟು ಕಡಿಮೆ ಇತ್ತು.

# ಪದವೀಧರರ ಕ್ಷೇತ್ರಕ್ಕೆ ಚುನಾವಣೆ

**(1ನೇ ಪುಟದಿಂದ)** ಅಧಿಸೂಚನೆ ಹೊರಡಿಸಲಾಗುವುದು. ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಅಕ್ಟೋಬರ್ 8 ನಾಮಪತ್ರ ಸಲ್ಲಿಕೆಗೆ ಕೊನೆ ದಿನ. ದಿನಾಂಕ 9 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಉಮೇದುವಾರಿಕೆ ಹಿಂಪಡೆಯಲು ದಿನಾಂಕ 12 ಕೊನೆ ದಿನವಾಗಿದೆ. ಮತದಾನವು ಅಕ್ಟೋಬರ್ 28 ರಂದು ನಡೆಯಲಿದ್ದು, ಮತಗಳ ಎಣಿಕೆ ಕಾರ್ಯವು ನವೆಂಬರ್ 2 ರಂದು ಜರುಗಲಿದೆ.

ಮಾದರಿ ನೀತಿ ಸಂಹಿತೆಯು ಚುನಾವಣಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂದಿನಿಂದ ಬರುವ ನವೆಂಬರ್ 5 ರವರೆಗೆ ಜಾರಿಯಲ್ಲಿರುತ್ತದೆ ಎಂದು ಕರ್ನಾಟಕ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ನವೀನ್ ರಾಜ್ ಸಿಂಗ್ ತಿಳಿಸಿದ್ದಾರೆ.

# ಶಾಲೆ ಬೇಗ ತೆರೆದ ಕೇಂದ್ರ ಸರ್ಕಾರ

**(1ನೇ ಪುಟದಿಂದ)** ನೀಡುವ ಬಗ್ಗೆಯೂ ರಾಜ್ಯ ಸರ್ಕಾರಗಳು ಅ.15ರ ನಂತರ ನಿರ್ಧರಿಸಬಹುದಾಗಿದೆ. ಪ್ರಸಕ್ತ 100 ಜನರು ಮಾತ್ರ ಸಮಾರಂಭಗಳಲ್ಲಿ ಸೇರಲು ಮಾತ್ರ ಅನುಮತಿ ಇದೆ.

ಕೇಂದ್ರ ಸರ್ಕಾರ ಅನುಮತಿ ನೀಡಿರುವ ಎಲ್ಲಾ ಚಟುವಟಿಕೆಗಳು ಕಂಟೈನ್‌ಮೆಂಟ್ ಹೊರಗೆ ಮಾತ್ರ ನಡೆಯಬೇಕಿದೆ. ಇದಕ್ಕಾಗಿ ಅಗತ್ಯ ಮಾರ್ಗಸೂಚಿಗಳನ್ನು ಅನುಸರಿಸಬೇಕಿದೆ.

# ಬಾಬರಿ ಧ್ವಂಸ ತೀರ್ಪು ಗೆದ್ದ ಭೀಷ್ಮ ಪಡೆ

**(1ನೇ ಪುಟದಿಂದ)** ಕೊರೊನಾ ಹಿನ್ನೆಲೆಯಲ್ಲಿ ಕಲ್ಯಾಣ್ ಸಿಂಗ್ ಹಾಗೂ ಉಮಾ ಭಾರತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೃತ್ಯ ಗೋಪಾಲ್ ದಾಸ್ ಸಹ ಕಳೆದ ತಿಂಗಳು ಕೊರೊನಾ ಸೋಂಕಿಗೆ ಗುರಿಯಾಗಿದ್ದರು.

ಮಧ್ಯಾಹ್ನ 12.10ರ ಸಮಯದಲ್ಲಿ ಪೀಠ ಅಲಂಕರಿಸಿದ ನ್ಯಾಯಮೂರ್ತಿ, ಕಾರ್ಯಗತಗೊಳಿಸಬೇಕಾದ ತೀರ್ಪಿನ ಭಾಗವನ್ನು ಐದು ನಿಮಿಷಗಳಲ್ಲಿ ಓದಿದರು.

ದೋಷಿಗಳಲ್ಲ ಎಂದು ತೀರ್ಪು ಪ್ರಕಟವಾದಾಗ ಕೆಲ ದೋಷಮುಕ್ತರು ಜೈ ಶ್ರೀರಾಮ್ ಎಂದು ಘೋಷಣೆ ಕೂಗಿದರು. ಮನೆಯಲ್ಲಿದ್ದ ಪ್ರಮುಖ ಆರೋಪಿ ಅದ್ವಾನಿ ಸಹ ರಾಮನಿಗೆ ಜಯಕಾರ ಹಾಕಿದರು.

ಇದು ಪ್ರಮುಖ ತೀರ್ಪಾಗಿದೆ ಹಾಗೂ ನಮಗೆಲ್ಲಾ ಸಂತೋಷ ತಂದಿದೆ. ನಮಗೆ ನ್ಯಾಯಾಲಯದ ಆದೇಶದ ಬಗ್ಗೆ ತಿಳಿದಾಗ ಜೈ ಶ್ರೀ ರಾಮ್ ಎಂದು ಸ್ವಾಗತಿಸಿದೆವು ಎಂದು ಅದ್ವಾನಿ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ.

ವರ್ಷದ ಹಿಂದಷ್ಟೇ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿ, ರಾಮ ಮಂದಿರ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿತ್ತು. ನ್ಯಾಯಾಲಯ ನೀಡಿರುವ ಈ ಎರಡೂ ತೀರ್ಪುಗಳು ಬಿಜೆಪಿಗೆ ಮತ್ತಷ್ಟು ಬಲ ನೀಡಿವೆ.

ರಾಮ ಜನ್ಮಭೂಮಿ - ಬಾಬ್ರಿ ಮಸೀದಿ ಪ್ರಕರಣದ ಮುಖ್ಯ ಖಟ್ಲೆದಾರರಾಗಿದ್ದ ಇಕ್ಬಾಲ್ ಅನ್ಸಾರಿ, ತೀರ್ಪನ್ನು ಸ್ವಾಗತಿಸಿದ್ದಾರೆ.

ಎಲ್ಲರೂ ದೋಷಮುಕ್ತವಾಗಿರುವುದು ಒಳ್ಳೆಯದು. ಏನೇ ಘಟನೆ ನಡೆಯುವುದಿದ್ದರೂ, ಅದು ಕಳೆದ ವರ್ಷ ನವೆಂಬರ್ 9ರಂದು ಮುಗಿದಿದೆ. ಈ ಪ್ರಕರಣ ಸಹ ಅಂದೇ ಮುಗಿಯಬೇಕಿತ್ತು ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಪ್ರಸ್ತಾಪಿಸಿ ಅನ್ಸಾರಿ ಹೇಳಿದ್ದಾರೆ.

ಈ ತೀರ್ಪನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಅಖಿಲ ಭಾರತ ಮುಸ್ಲಿಮ್ ವೈಯಕ್ತಿಕ ಕಾನೂನು ಮಂಡಳಿ ಸದಸ್ಯ ಹಾಗೂ ಹಿರಿಯ ವಕೀಲ ಜಫರ್ಯಾಬ್ ಜಿಲಾನಿ ಹೇಳಿದ್ದಾರೆ.

ಲಖ್ನೌದಲ್ಲಿ ಮಾತನಾಡಿರುವ ಸಿಬಿಐ ವಕೀಲ ಲಲಿತ್ ಸಿಂಗ್, ತೀರ್ಪು ಪರಿಶೀಲಿಸಿದ ನಂತರ ಮೇಲ್ಮನವಿ ಸಲ್ಲಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದಿದ್ದಾರೆ.

48 ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದ ಸಿಬಿಐ, 351 ಸಾಕ್ಷಿಗಳು ಹಾಗೂ 600 ದಾಖಲೆಗಳನ್ನು ಸಾಕ್ಷಿಗಳಾಗಿ ಹಾಜರು ಪಡಿಸಿತ್ತು.

ಬಾಬ್ರಿ ಮಸೀದಿ ಧ್ವಂಸಕ್ಕೆ ಸಂಬಂಧಿಸಿದಂತೆ ಕಾರ್ಯಕರ್ತರು ಹಾಗೂ ಕೇಸರಿ ಸಂಘಟನೆಗಳ ಹಿರಿಯ ನಾಯಕರ ವಿರುದ್ಧ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿತ್ತು. ನಂತರ ಎರಡೂ ಪ್ರಕರಣಗಳನ್ನು ವಿಲೀನಗೊಳಿಸಲಾಗಿತ್ತು.

ಒಂದು ಹಂತದಲ್ಲಿ ಕ್ರಿಮಿನಲ್ ಸಂಚಿನ ಆರೋಪಗಳನ್ನು ಕೈ ಬಿಡಲಾಗಿತ್ತು. ಆದರೆ, ಸುಪ್ರೀಂ ಕೋರ್ಟ್ 2017ರಲ್ಲಿ ಮತ್ತೆ ಆರೋಪಗಳನ್ನು ನೆಲೆಗೊಳಿಸಿತ್ತಲ್ಲದೇ, ಪ್ರತಿದಿನ ವಿಚಾರಣೆ ನಡೆಸಲು ಆದೇಶ ಹೊರಡಿಸಿತ್ತು.

# ತೆರವಿನ ಅರ್ಜಿ ತಿರಸ್ಕೃತ

**(1ನೇ ಪುಟದಿಂದ)** ಕಳೆದ ವಾರ ಕೆಲವರು ಮಥುರಾ ನ್ಯಾಯಾಲಯದ ಮೊರೆ ಹೋಗಿದ್ದು, ಶ್ರೀ ಕೃಷ್ಣ ದೇವರ ಜನ್ಮಸ್ಥಳ ಎಂಬಲ್ಲಿ ನಿರ್ಮಾಣವಾಗಿರುವ ಕೇಶವ ದೇವಾಲಯದ ಬಳಿ ಇರುವ 17ನೇ ಶತಮಾನದ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸಬೇಕೆಂದು ಅರ್ಜಿ ದಾಖಲಿಸಿದ್ದರು.

ಸಿವಿಲ್ ನ್ಯಾಯಾಲಯದ ಹಿರಿಯ ವಿಭಾಗದ ಎದುರು ಅರ್ಜಿ ದಾಖಲಿಸಿ, ಈ ಹಿಂದೆ ಶ್ರೀ ಕೃಷ್ಣ ಜನ್ಮಸ್ಥಾನ ಸೇವಾ ಸಂಸ್ಥಾನ ಹಾಗೂ ಶಾಹಿ ಈದ್ಗಾ ಮ್ಯಾನೇಜ್‌ಮೆಂಟ್ ಕಮಿಟಿ ನಡುವೆ ಮಸೀದಿಯ ಕುರಿತು ಆಗಿರುವ ಒಪ್ಪಂದ ರದ್ದುಗೊಳಿಸಬೇಕೆಂದು ಕೋರಿದ್ದರು.

ಭಗವಾನ್ ಶ್ರೀಕೃಷ್ಣ ವಿರಾಜಮಾನ್ ಅವರ 'ನಿಕಟ ಗೆಳೆಯ' ಎಂದು ತಮ್ಮನ್ನು ಭಾವಿಸಿ ಅರ್ಜಿ ದಾಖಲಿಸಿಕೊಳ್ಳಬೇಕೆಂದು ರಂಜನಾ ಅಗ್ನಿಹೋತ್ರಿ ಹಾಗೂ ಇತರೆ ಏಳು ಜನರು ಅರ್ಜಿ ದಾಖಲಿಸಿದ್ದರು.

ಯಾರಾದರೂ ವ್ಯಕ್ತಿ ನೇರವಾಗಿ ತಮ್ಮನ್ನು ಪ್ರಕರಣದಲ್ಲಿ ಪ್ರತಿನಿಧಿಸಲು ಸಾಧ್ಯವಾಗದ ಸಂದರ್ಭದಲ್ಲಿ 'ನಿಕಟ ಗೆಳೆಯ' ಎಂಬ ಕಾನೂನು ಪದವನ್ನು ಬಳಕೆ ಮಾಡಲಾಗುತ್ತದೆ.

# ಜಗಳೂರು ತಾಲ್ಲೂಕಿಗೆ ಇಂದು ಎಸಿಬಿ ಭೇಟಿ

ದಾವಣಗೆರೆ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಜಗಳೂರು ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದುಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ವಿವರಕ್ಕೆ ದೂರವಾಣಿ 08192-236600, 94808 06227, 9480806283 ಕ್ಕೆ ಸಂಪರ್ಕಿಸಬಹುದೆಂದು ಎಸಿಬಿ ಡಿವೈಎಸ್‌ಪಿ ಹೆಚ್.ಎಸ್.ಪರಮೇಶ್ವರ್ ತಿಳಿಸಿದ್ದಾರೆ.

# ನಗರದಲ್ಲಿಂದು ಕಾಮ್ರೆಡ್ ಸಭೆ

ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿಯ ಎಐಕೆಎಸ್ ಸಿ.ಸಿ ರಾಜ್ಯ ಸಮಿತಿಯ ಸೂಚನೆ ಮೇರೆಗೆ ನಾಳೆ ಶುಕ್ರವಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದೆ. ಆದ್ದರಿಂದ ಎಲ್ಲಾ ರೈತ ಪರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ ರಕ್ಷಣಾ ವೇದಿಕೆಯ ಪದಾಧಿಕಾರಿಗಳ ಸಂಯುಕ್ತ ಸಭೆಯನ್ನು ಕಾಂ. ಪಂಪಾಪತಿ ಭವನದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಕರೆಯಲಾಗಿದೆ ಎಂದು ಆವರಗೆರೆ ಹೆಚ್.ಜಿ.ಉಮೇಶ್, ಹುಚ್ಚವ್ವನಹಳ್ಳಿ ಮಂಜುನಾಥ್ ತಿಳಿಸಿದ್ದಾರೆ.

## ಹೆಚ್.ಎಂ. ಬಸವರಾಜಯ್ಯ ನಿಧನ



ದಾವಣಗೆರೆ ತಾಲ್ಲೂಕು ಬಾಡಾ ಗ್ರಾಮದ ವಾಸಿ ಹೆಚ್.ಎಂ. ಬಸವರಾಜಯ್ಯ (75) ಅವರು, ದಿನಾಂಕ 30.09.2020 ರಂದು ಬುಧವಾರ ರಾತ್ರಿ 10.30 ಕ್ಕೆ ನಿಧನರಾದರು. ಪತ್ನಿಯರು, ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.10.2020 ರಂದು ಗುರುವಾರ ಮಧ್ಯಾಹ್ನ 2 ಗಂಟೆಗೆ ಬಾಡಾ ಗ್ರಾಮದಲ್ಲಿ ನೆರವೇರಲಿದೆ.

## 7ನೇ ವರ್ಷದ ಪುಣ್ಯಸ್ಮರಣೆ



ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು, ಪಾಲಿಕೆ ನೌಕರರ ಸಂಘದ ಅಧ್ಯಕ್ಷರು, ವಾಲ್ಮೀಕಿ ಸಮಾಜದ ಹಿರಿಯ ಮುಖಂಡರಾದ

**ದಿ|| ಬಡಗಿ ಕೃಷ್ಣಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು.

ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗ.

**ಸದಾ ನಿಮ್ಮ ಸ್ಮರಣೆಯಲ್ಲಿರುವ:**

- ಶ್ರೀಮತಿ ಲೀಲಾವತಿ ಶ್ರೀ ಮಲ್ಲೇಶಪ್ಪ ಮತ್ತು ಮಕ್ಕಳು. ರೈಲ್ವೆ ಇಲಾಖೆ.
- ಶ್ರೀಮತಿ ಲಕ್ಷ್ಮೀದೇವಿ (ಮಹಾನಗರ ಪಾಲಿಕೆ ಮಾಜಿ ಸದಸ್ಯರು)
- ಶ್ರೀ ಬಿ.ವೀರಣ್ಣ ಮತ್ತು ಮಕ್ಕಳು ಅಧ್ಯಕ್ಷರು ನಾಯಕ ಸಮಾಜ, ಮಾಜಿ ನಗರಸಭಾಧ್ಯಕ್ಷರು.
- ಶ್ರೀಮತಿ ಶಾಂತಮ್ಮ ಶ್ರೀ ರಂಗಸ್ವಾಮಿ ಮತ್ತು ಮಕ್ಕಳು, ಆರೋಗ್ಯ ಇಲಾಖೆ.
- ಶ್ರೀಮತಿ ಶ್ವೇತಾ ಶ್ರೀ ಬಿ.ಕೆ. ರಾಮಕೃಷ್ಣ ಮತ್ತು ಮಕ್ಕಳು
- ಶ್ರೀಮತಿ ಲಾವಣ್ಯ ಶ್ರೀ ಬಿ.ಕೆ.ರಾಘವೇಂದ್ರ ಮತ್ತು ಮಕ್ಕಳು.
- ಶ್ರೀ ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ, ಸದಸ್ಯರು.
- ಶ್ರೀ ದೇವೀರಮ್ಮ, ಶ್ರೀಮತಿ ದುಗ್ಗಮ್ಮ, ಶ್ರೀ ಬಿ.ಹೆಚ್. ಮಂಜುನಾಥ್, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.


**ಸೈಟ್‌ಗಳು ಮಾರಾಟಕ್ಕಿವೆ,** ನಿಜಲಿಂಗಪ್ಪ ಬಡಾವಣೆಯಲ್ಲಿ 40x60 ದಕ್ಷಿಣ, 35x60 North west corrner, ನವೋದಯ ಸ್ಕೂಲ್ ಹತ್ತಿರ, 30x50 ದಕ್ಷಿಣ ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಮನೆ ಕಟ್ಟಿಕೊಡಲಾಗುವುದು** SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು. ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್, 8139988555, 96323 00009 ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಜಾಗ ಮಾರಾಟಕ್ಕಿದೆ** ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 12.8 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ: 87109 64433

**ಗಿರ್ ಹಸುವಿನ ಹಾಲು ದೊರೆಯುತ್ತದೆ** ರಸವಂತಿ ಕೂಲ್‌ಡ್ರಿಂಕ್ಸ್ ರಾಂ ಅಂಡ್ ಕೋ ಸರ್ಕಲ್ ಫೋ. : 99021 85212 70194 81919

**ಮನೆ ಬಾಡಿಗೆಗೆ ಇದೆ** 3 ಬೆಡ್ ರೂಂವುಳ್ಳ, ಬೋರ್‌ವೆಲ್ ವ್ಯವಸ್ಥೆ ಇರುವ ಮನೆ ಮೊದಲನೆ ಮಹಡಿಯಲ್ಲಿ ಮನೆ ಬಾಡಿಗೆಗಿದೆ. ಶಿವಕುಮಾರ್, ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ. ಫೋ. : 99862 11294

**ಸೈಟುಗಳು ಮಾರಾಟಕ್ಕಿವೆ** ಬನಶಂಕರಿ ಲೇಔಟ್, ಎಸ್.ಎಸ್. ಲೇಔಟ್, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಬಡಾವಣೆ ಹಾಗೂ ಬಾಡಾ ಕ್ರಾಸ್ ಹತ್ತಿರ, ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ, ಭೂಮಿಕ ಲೇಔಟ್, ಪುಷ್ಪ ಮಹಾಲಿಂಗಪ್ಪ ಶಾಲೆ ಹತ್ತಿರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ ಯೋಗ್ಯ ಬೆಲೆಗೆ ದೊರೆಯುತ್ತವೆ. ಅಭಿಷೇಕ್ ಅಳ್ಳೇರ್, ಏಜೆಂಟ್ 97315 12365

**WANTED** Sales Man Sales Girls Cashier Accountant ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್ ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ 30x40 ಪಶ್ಚಿಮ, 40x45 ಪೂರ್ವ 40 ಅಡಿ ರೋಡಿಗಿದೆ, 40x70 ಪೂರ್ವ, 30x50 ಪಶ್ಚಿಮ, 30x50 ಪೂರ್ವ ಸೈಟ್‌ಗಳು ಮಾರಾಟಕ್ಕಿವೆ. ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಮನೆ ಮಾರಾಟಕ್ಕೆ ಇದೆ** ದೇವರಾಜ ಅರಸ್ ಲೇಔಟ್, 8ನೇ ಮೇನ್, ಬಿ ಬ್ಲಾಕ್, 32x42 ಅಳತೆಯ ದಾವಣಗೆರೆಯಲ್ಲಿ 3 ಬೆಡ್ ರೂಂ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ ಫೋ. : 95919 77951

**ಮನೆ ಬಾಡಿಗೆಗಿದೆ** 3BHK/2BHK, ಕಾರ್ಪೊರೇಷನ್ ನೀರು, ಬೋರ್, ಕಾರ್ ಪಾರ್ಕಿಂಗ್ ವ್ಯವಸ್ಥೆಗಳಿರುವ ವಾಸ್ತು ಪ್ರಕಾರದ ಪೂರ್ವ ಮುಖದ, ಸ್ವತಂತ್ರವಾದ ಮನೆ ಮೆಡಿಕಲ್ ಹಾಸ್ಟೆಲ್ ಪಕ್ಕದಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ) 63015 58346

**ನೀರಾವರಿ ಜಮೀನು ಮಾರಾಟಕ್ಕಿದೆ** ಹರಿಹರ - ರಾಜನಹಳ್ಳಿ @ Rs. 16 ಲಕ್ಷ ಎಕರೆಗೆ ಫೋ. : 74112 40447

**ಸೈಟ್ ಮಾರಾಟಕ್ಕೆ ಇದೆ** 44x60 ಅಳತೆಯ 9ನೇ ಮೇನ್, ಎಂ.ಸಿ.ಸಿ 'ಎ' ಬ್ಲಾಕ್ ಸಾಯಿಬಾಬಾ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿರುವ ಖಾಲಿ ಸೈಟ್. 86600 44143 98447 78891

**WANTED** ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ Salary Rs. 9,000/- ನಂದಿ ಟೈರ್ ಪ್ಲಾನೆಟ್ 95381 87385, 08192 261003

**ಬಾಡಿಗೆಗೆ ಭೋಗ್ಯಕ್ಕೆ ಇದೆ** ದಾವಣಗೆರೆ ಕಸ್ತೂರಬಾ ಬಡಾವಣೆ 9ನೇ ಕ್ರಾಸ್, #679 ಹಾಗೂ ಸರ್ಕಿಟ್ ಹೌಸ್ ಹತ್ತಿರ ಕೊರಿಯರ್ ಲಾಜಿಸ್ಟಿಕ್ ಟ್ರಾನ್ಸ್‌ಪೋರ್ಟ್, ಗಾರ್ಡನ್ ಕ್ಯಾಂಟೀನ್‌ಗೆ 60x40 ಸೌಲಭ್ಯವುಳ್ಳ 2 ಮಳಿಗೆ ಮತ್ತು ಮನೆ ತಕ್ಷಣ ದೊರೆಯುತ್ತವೆ. 94800 00417 63639 36547

**ಪ್ರವೇಶ ಪ್ರಕಟಣೆ** SSLC, PUC, ITI - Pass/ Fail ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ 6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಮಾನಸ ಕಮ್ಯೂನಿಟಿ ಕಾಲೇಜ್ ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 97402 58276

**ಮಾರಾಟಕ್ಕಿದೆ** ಜನರಲ್ ಸ್ಟೋರ್ (ಕಿರಾಣಿ ಅಂಗಡಿ)ಗೆ ಉಪಯೋಗವಾಗುವ ಶೋ ಕೇಸ್ ಮಾರಾಟಕ್ಕಿದೆ ಆಸಕ್ತರು ಸಂಪರ್ಕಿಸಿ: 99453 21532

**ಮಾರಾಟಕ್ಕೆ ಇದೆ** ಹೈಡ್ರಾಲಿಕ್ ಡಬಲ್ ಡೈ ಪುಲ್ ಆಟೋ ಮ್ಯಾಟಿಕ್ ಪೇಪರ್ ಪ್ಲೇಟ್ ಮಿಷನ್ ಮಾರಾಟಕ್ಕಿದೆ. 98446 67785

GST Registration/ Returns Filing income Tax/ GST Cases, Project Reports, Audit & Account Maintenances Contact : MEGHANA ASSOCIATES (R) (M) 99809 16126

**ಬೇಕಾಗಿದ್ದಾರೆ** ದಾವಣಗೆರೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ವಸತಿ, ESI, PF ಸೌಲಭ್ಯವಿದೆ. ಸಫಾಜ್ ಸೆಕ್ಯೂರಿಟಿ ಸರ್ವೀಸ್ ಈದ್ಗಾ ಕಾಂಪ್ಲೆಕ್ಸ್, ಪಿ.ಬಿ.ರೋಡ್ ದಾವಣಗೆರೆ. 96113 94063, 91130 53483

**NGO-Trust,** ಸಂಘ-ಸಂಸ್ಥೆಗಳ ಬೈಲಾ ನೋಂದಣಿ, ನವೀಕರಣ, ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ: MEGHANA ASSOCIATES (R) (M) 99809 16126

**ಓದುಗರ ಗಮನಕ್ಕೆ** ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**WANTED** Softwear Engineer any PHP Developers. Minimum 1 year experence any Degree, MCA, BCA, B.Sc, S.N.A Plaza 2nd Floor, Edga complex, Davangere. Interview Date: 30.09.2020 & 01.10.2020 At 11AM 99028 18149

**ಡಾ|| ಸೋಮಶೇಖರ್. ಎಸ್.ಎ.** Rheumatologist ಇವರು ದಿ. 01.10.2020ರ ಗುರುವಾರ ಮತ್ತು 02.10.2020ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ. ಅನುಗ್ರಹ ಆಸ್ಪತ್ರೆ ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. 08192-222292

**WANTED** Urgent Requirement Telecaller Kannada both fresher and experienced Salary 8000/- 87224 28871 info@vedavititsolutions.com

**ನೀರಿನ ಲೀಕೇಜ್** (ವಾಟರ್ ಪ್ರೂಫಿಂಗ್) ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ: ಮೊ. 9538777582 ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ** ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಶ್ರೀಧರ್ ಅಕ್ವೇರಿಯಂ 98449 76373

**ಸುವರ್ಣಾವಕಾಶ** ಮನೆಯಲ್ಲಿ ಪ್ರೊಡಕ್ಟ್ ತಯಾರಿಸಿ ಪ್ರತಿದಿನ 800/- ರಿಂದ 1200/- ವರೆಗೆ ಗಳಿಸಿರಿ, ಸಾಮಗ್ರಿಗಳನ್ನು ಉಚಿತವಾಗಿ ಮನೆಗೆ ತಲುಪಿಸಲಾಗುವುದು. ಸಾಯಿನಾಥ ಉದ್ಯೋಗ ಮಂಡಿಪೇಟೆ, ದಾವಣಗೆರೆ. 89511 99453

**ಮಾಂತ್ರಿಕ ಮೋಡಿ ಬೆಟ್ಟಪ್ಪ** ನಂ.1 ವಶೀಕರಣ ಸ್ಪೆಷಲಿಸ್ಟ್ ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ. 89716 99826

**ಅಧಿಕೃತ ಚೀಟಿ ಸಂಸ್ಥೆ** ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02 84531 61869

# ಯುವತಿ ಅತ್ಯಾಚಾರ ಆರೋಪ ಎಐಡಿಎಸ್‌ಓ ಪ್ರತಿಭಟನೆ

ದಾವಣಗೆರೆ, ಸೆ.30- ನವದೆಹಲಿಯ ಯುಪಿ ಭವನದ ಎದುರು ಎಐಡಿವೈಓ - ಎಐಎಂಎಸ್‌ಎಸ್ ಮತ್ತು ಎಐಡಿಎಸ್‌ಓ ಸಂಘಟನೆಗಳು ಜಂಟಿಯಾಗಿ ಪ್ರತಿಭಟಿಸುತ್ತಿದ್ದ ವೇಳೆ ಶಾಂತಿಪೂರ್ಣ ಪ್ರತಿಭಟನಾಕಾರರನ್ನು ಬಂಧಿಸಿರುವ ಕ್ರಮವನ್ನು ಎಐಡಿವೈಓ ರಾಜ್ಯ ಸಮಿತಿಯು ಖಂಡಿಸಿದ್ದು, ಬಂಧಿಸಲ್ಪಟ್ಟವರನ್ನು ಬಿಡುಗಡೆಗೊಳಿಸಲು ಆಗ್ರಹಿಸಿದೆ.

ಉತ್ತರ ಪ್ರದೇಶದ ಯುವತಿ ಮೇಲಿನ ಗುಂಪು ಅತ್ಯಾಚಾರ ಮತ್ತು ಕಗ್ಗೊಲೆ ಖಂಡಿಸಿ ಮೃತಳಿಗೆ ನ್ಯಾಯಕ್ಕಾಗಿ ಮತ್ತು ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ನೀಡುವಂತೆ ಆಗ್ರಹಿಸಿ ಪ್ರತಿಭಟಿಸುತ್ತಿದ್ದಾಗ ಏಕಾಏಕಿ ದಾಳಿ ಮಾಡಿ ಪ್ರತಿಭಟನಾಕಾರರನ್ನು ಬಂಧಿಸಿರುವುದು ಪೊಲೀಸರ ದೌರ್ಜನ್ಯಕಾರಿ ನಡವಳಿಕೆಗೆ ಸಾಕ್ಷಿಯಾಗಿದೆ. ಯುಪಿ ಪೊಲೀಸರು ಗಾಯಗೊಂಡಿದ್ದ ಸಂತ್ರಸ್ತೆಗೆ ಚಿಕಿತ್ಸೆ ಕೊಡಿಸಲು ವಿಳಂಬ ಮಾಡಿದ್ದೂ ಅಲ್ಲದೆ, ಆರೋಪಿಗಳನ್ನು ಬಂಧಿಸಲೂ ಸಹ ನಿರ್ಲಕ್ಷ್ಯ ತೋರಿದ್ದರು. ಜನತಾಂತ್ರಿಕ ಮೌಲ್ಯಗಳನ್ನು ನಂಬುವ ಜನತೆಯನ್ನು ಭಯಭೀತರನ್ನಾಗಿಸುವ ಮತ್ತು ಆಡಳಿತದ ಹಾಗೂ ಪೊಲೀಸರ ಕರ್ತವ್ಯಲೋಪವನ್ನು ಪ್ರಶ್ನಿಸುವವರಿಗೆ ಎಚ್ಚರಿಕೆ ನೀಡುವ ಉದ್ದೇಶವನ್ನು ಪೊಲೀಸರ ಈ ನಡವಳಿಕೆ ಹೊಂದಿದೆ. ಪ್ರತಿಭಟನಾಕಾರರೆಲ್ಲರನ್ನೂ ಈ ಕೂಡಲೇ ಬೇಷರತ್ತಾಗಿ ಬಿಡುಗಡೆ ಮಾಡುವಂತೆ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ಎಸ್. ಕುಮಾರ್ ಒತ್ತಾಯಿಸಿದ್ದಾರೆ.

# ಭದ್ರತೆಗಾಗಿ ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರ ಮುಷ್ಕರ




ಹರಪನಹಳ್ಳಿ, ಸೆ. 30- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ತಾಲ್ಲೂಕಿನ ಆರೋಗ್ಯ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಆರಂಭಿಸಿದ್ದ ಮುಷ್ಕರ ಮುಂದುವರೆದಿದೆ.

ತಾಲ್ಲೂಕಿನಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ 160 ಜನ ಸ್ಟಾಫ್ ನರ್ಸ್, ಎಎನ್‌ಎಂ, ಲ್ಯಾಬ್ ಟೆಕ್ನೀಷಿಯನ್ ಹೀಗೆ 160 ಜನ ಸಿಬ್ಬಂದಿ ಇದ್ದಾರೆ. ಅವರೆಲ್ಲರೂ ಕಳೆದ ಒಂದು ವಾರದಿಂದ ಕೆಲಸಕ್ಕೆ ಗೈರಾಗಿ ಮನೆಯಲ್ಲಿದ್ದು ಪ್ರತಿಭಟನೆ ನಡೆಸಿದ್ದಾರೆ.

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಗುತ್ತಿಗೆ ರದ್ದುಗೊಳಿಸಿ ಸೇವಾ ಭದ್ರತೆ ಒದಗಿಸಬೇಕು ಮುಂತಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟು ಮುಷ್ಕರಕ್ಕೆ ಧುಮುಕಿದ್ದಾರೆ.

ನಾವು ಮುಷ್ಕರ ಆರಂಭಿಸಿದ ನಂತರ ಆರೋಗ್ಯ ಇಲಾಖೆಯಿಂದ ಕೆಲಸಕ್ಕೆ ಹಾಜರಾಗಿ, ಇಲ್ಲದಿದ್ದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಸೂಚಿಸಿದ್ದಾರೆ ಎಂದು ಪ್ರತಿಭಟನಾ ನಿರತರು ಅಸಮಾಧಾನ ವ್ಯಕ್ತಪಡಿಸಿ, ನಮ್ಮ ಸಂಘದ ರಾಜ್ಯ ಘಟಕದಿಂದ ನಿರ್ದೇಶನ ಬರುವವರೆಗೂ ಮುಷ್ಕರ ನಡೆಸುವುದಾಗಿ ಸ್ಪಷ್ಟಪಡಿಸಿದರು.

ಈ ಕುರಿತು ಪ್ರತಿಕ್ರಿಯೆ ನೀಡಿದ ತಾಲ್ಲೂಕು ವೈದ್ಯಾಧಿಕಾರಿ ಡಾ. ಶಿವಕುಮಾರ್ ಅವರು ಗುತ್ತಿಗೆ ಹಾಗೂ ಹೊರ ಗುತ್ತಿಗೆ ನೌಕರರ ಮುಷ್ಕರದಿಂದ ಸ್ವಲ್ಪಮಟ್ಟಿಗೆ ಸಮಸ್ಯೆಯಾಗಿದ್ದರೂ ನಿಭಾಯಿಸುತ್ತಿದ್ದೇವೆ. ಗಂಭೀರವಾದ ಸಮಸ್ಯೆಯಾಗಿಲ್ಲ. ಬಳ್ಳಾರಿ ಡಿಹೆಚ್‌ಓ ಅವರು ಈವರೆಗೂ ಶಿಸ್ತು ಕ್ರಮದ ಸುತ್ತೋಲೆ ಕಳುಹಿಸಿಲ್ಲ. ಅವರ ಬೇಡಿಕೆಗಳ ಕುರಿತು ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಗುತ್ತಿಗೆ ಹಾಗೂ ಹೊರ ಗುತ್ತಿಗೆ ನೌಕರರ ಸಂಘದ ಮುಖಂಡರಾದ ಗೋವಿಂದರಾಜ್, ರೇಖಾ, ಸುನೀತಾ, ಮರುಳಾಕ್ಷಿ, ಶಿಲ್ಪಾ ಸೇರಿದಂತೆ ಅನೇಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

## ಬಾಬರಿ ಧ್ವಂಸ ಪ್ರಕರಣ : ಗಂಗಾಧರ್ ಸಂತಸ



ದಾವಣಗೆರೆ, ಸೆ.30- ಬಾಬರಿ ಮಸೀದಿ ಧ್ವಂಸಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಇಂದು ನೀಡಿರುವ ತೀರ್ಪಿನ ಬಗ್ಗೆ ನಗರದ ಎಪಿಎಂಸಿ ಮಾಜಿ ಅಧ್ಯಕ್ಷ ತುಂಬಿಗೆರೆ ಬಿ.ಗಂಗಾಧರ್ ಸಂತಸ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ, ಮುರುಳಿ ಮನೋಹರ ಜೋಷಿ, ಉಮಾ ಭಾರತಿ, ಕಲ್ಯಾಣ ಸಿಂಗ್ ಸೇರಿ ದಂತೆ ಒಟ್ಟು 36 ಜನರನ್ನು ಲಕ್ನೋ ಸಿಬಿಐ ವಿಶೇಷ ನ್ಯಾಯಾ ಲಯ ಖುಲಾಸೆ ಮಾಡಿರುವುದನ್ನು ಅವರು ಸ್ವಾಗತಿಸಿದ್ದಾರೆ.

ರಾಷ್ಟ್ರೀಯ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಪ್ರವಾಸೋದ್ಯಮ ಇಲಾಖೆ ಖಾತೆ ಸಚಿವ ಸಿ.ಟಿ. ರವಿ ಅವರನ್ನು ಗಂಗಾಧರ್ ಅಭಿನಂದಿಸಿದ್ದಾರೆ.

## ಮೆಕ್ಕೆಜೋಳ-ಭತ್ತ : ನಗರದಲ್ಲಿಂದು ರೈತರ ಸಭೆ

ಮೆಕ್ಕೆಜೋಳ ಮತ್ತು ಭತ್ತ ಖರೀದಿ ಕೇಂದ್ರ ಪ್ರಾರಂಭಿಸದ ಸಂಬಂಧ ಚರ್ಚಿಸಲು ಇಂದು ಬೆಳಗ್ಗೆ 11 ಗಂಟೆಗೆ ಎಪಿಎಂಸಿ ಸಭಾಂಗಣದಲ್ಲಿ ರೈತರ ಮತ್ತು ರೈತ ಸಂಘದ ಪದಾಧಿಕಾರಿಗಳ ಸಭೆ ಕರೆಯಲಾಗಿದೆ. ಒಂದು ತಿಂಗಳ ಹಿಂದೆಯೇ ಮುಖ್ಯಮಂತ್ರಿ ಗಳಿಗೆ ಜಿಲ್ಲಾಧಿಕಾರಿಗಳ ಮುಖಾಂ ತರ ಮನವಿ ಸಲ್ಲಿಸಲಾಗಿದ್ದರೂ ಈವರೆಗೂ ಸರ್ಕಾರದಿಂದ ಖರೀದಿ ಕೇಂದ್ರ ತೆರೆಯುವ ಬಗ್ಗೆ ಯಾವುದೇ ಸೂಚನೆ ಬಂದಿಲ್ಲ. ಆದ್ದರಿಂದ ಸಭೆಯಲ್ಲಿ ಈ ಬಗ್ಗೆ ಚರ್ಚಿಸು ವುದಾಗಿ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಹಾಗೂ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಅಣಬೇರು ಕುಮಾರಸ್ವಾಮಿ ತಿಳಿಸಿದ್ದಾರೆ.

## ಇಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಹಿರಿಯ ನಾಗರಿಕರ ಸಂಘ ಹಾಗೂ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಶ್ರೇಯೋಭಿವೃಗಾಗಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಘ ಸಂಸ್ಥೆಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮವು ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಸಚಿವ ಬಿ.ಎ.ಬಸವರಾಜ್ ಭೈರತಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳು : ಎಂ.ಪಿ ರೇಣುಕಾಚಾರ್ಯ, ಜಿ.ಎಂ ಸಿದ್ದೇಶ್ವರ, ಶ್ರೀಮತಿ ದೀಪಾ ಜಗದೀಶ್, ಡಾ. ಶಾಮನೂರು ಶಿವಶಂಕರಪ್ಪ ಮತ್ತಿತರರು.

## ಗಾಂಧಿ ಗ್ರಾಮ ಪುರಸ್ಕಾರ ಯೋಜನೆಗೆ ಉಚ್ಚಂಗಿದುರ್ಗ ಆಯ್ಕೆ

ಹರಪನಹಳ್ಳಿ, ಸೆ. 30 - ಸರ್ಕಾರದ 2019-20ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಯೋಜನೆಗೆ ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮ ಪಂಚಾಯ್ತಿ ಆಯ್ಕೆಯಾಗಿದೆ.

ಬಳ್ಳಾರಿ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಉಚ್ಚಂಗಿದುರ್ಗದ ಗ್ರಾಮ ಪಂಚಾಯ್ತಿ ಸಲ್ಲಿಸಿದ್ದ ಅರ್ಜಿಯು ಹೆಚ್ಚು ಅಂಕ ಗಳಿಸಿದ ಪರಿಣಾಮ ತಾಲ್ಲೂಕಿಗೆ ಈ ಪುರಸ್ಕಾರ ಲಭಿಸಿದೆ ಎಂದು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಟಿ.ಈ.ಉಮೇಶ್ ತಿಳಿಸಿದ್ದಾರೆ.


## ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ

ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಕಟ್ಟಡ, ಗಾಂಧಿ ಸರ್ಕಲ್ ಹತ್ತಿರ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577 002.

**ದಿನಾಂಕ 01.10.2020ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಠೇವಣಾತಿಗಳ ಮೇಲಿನ ಬಡ್ಡಿ ದರವನ್ನು ಪರಿಷ್ಕರಿಸಲಾಗಿದೆ.**

**ಒಕ್ಕೂಟದ ಸದಸ್ಯ ಬ್ಯಾಂಕುಗಳ ಹೆಸರು**

- ✦ ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ.,
- ✦ ಬಾಪೂಜಿ ಕೋ-ಆಪ್. ಬ್ಯಾಂಕ್ ಲಿ.,
- ✦ ದಿ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ.,
- ✦ ಶಿವ ಸಹಕಾರಿ ಬ್ಯಾಂಕ್ ಲಿ.,
- ✦ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,
- ✦ ಮಿಲ್ಲತ್ ಕೋ-ಆಪ್. ಬ್ಯಾಂಕ್ ಲಿ.,
- ✦ ಶ್ರೀ ಮುರುಘರಾಜೇಂದ್ರ ಕೋ-ಆಪ್. ಬ್ಯಾಂಕ್ ಲಿ.,
- ✦ ಅಂಬಾಭವಾನಿ ಕೋ-ಆಪ್. ಬ್ಯಾಂಕ್ ಲಿ.,
- ✦ ಕನಕ ಪಟ್ಟಣ ಸಹಕಾರಿ ಬ್ಯಾಂಕ್ ಲಿ.,
- ✦ ಸಿಟಿ ಕೋ-ಆಪ್. ಬ್ಯಾಂಕ್ ಲಿ.,

**ಪರಿಷ್ಕೃತ ಬಡ್ಡಿದರ ದಿನಾಂಕ : 01.10.2020ರಿಂದ ಅನ್ವಯ**

| ಕ್ರ. ಸಂ. | ವಿವರಗಳು | ರೆಗ್ಯುಲರ್ | ಹಿರಿಯ ನಾಗರಿಕರಿಗೆ |
|---|---|---|---|
| 1 | 15 ದಿನಗಳಿಂದ 90 ದಿನಗಳವರೆಗೆ | 3.50 | 3.50 |
| 2 | 91 ದಿನಗಳಿಂದ 180 ದಿನಗಳವರೆಗೆ | 4.50 | 4.50 |
| 3 | 181 ದಿನಗಳಿಂದ 1 ವರ್ಷಗಳವರೆಗೆ | 5.50 | 5.50 |
| 4 | 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 6.50 | 7.00 |
| 5 | 2 ವರ್ಷಗಳ ಮೇಲ್ಪಟ್ಟು 3 ವರ್ಷಗಳವರೆಗೆ | 6.75 | 7.25 |
| 6 | 3 ವರ್ಷಗಳ ಮೇಲ್ಪಟ್ಟು | 6.50 | 7.00 |

ದಿನಾಂಕ : 01.04.2020ರಿಂದ ಉಳಿತಾಯ ಖಾತೆ ಪರಿಷ್ಕೃತ ಬಡ್ಡಿ ದರ ಶೇ. 3%

ವಿ.ಸೂ. : 1) ಹಿರಿಯ ನಾಗರಿಕರಿಗೆ ಒಂದು ವರ್ಷದ ಮೇಲ್ಪಟ್ಟ ಠೇವಣಿಗಳಿಗೆ ಶೇ. 0.50% ಹೆಚ್ಚಿಗೆ ಬಡ್ಡಿಯನ್ನು ನೀಡಲಾಗುವುದು.
2) ಒಂದು ವರ್ಷದ ಮೇಲ್ಪಟ್ಟ ಠೇವಣಿ ಮೊತ್ತ ರೂ. 25.00 ಲಕ್ಷ ಮೀರಿದರೆ (ಒಂದೇ ಖಾತೆಯಲ್ಲಿ) 0.50% ಹೆಚ್ಚಿಗೆ ಬಡ್ಡಿ ನೀಡಲಾಗುವುದು. ಹಿರಿಯ ನಾಗರಿಕರಿಗೆ ಸಿಗುವ ಹೆಚ್ಚಿಗೆ ಬಡ್ಡಿ ದರ ಈ ಖಾತೆಗಳಿಗೆ ಅನ್ವಯವಾಗುವುದಿಲ್ಲ.

ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ, ರಾಷ್ಟ್ರೀಕೃತ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಇಡುವ ಠೇವಣಾತಿಗಳಿಗೆ 5 ಲಕ್ಷಗಳವರೆಗೆ ವಿಮಾ ರಕ್ಷಣೆ ಒದಗಿಸಿರುವ ಸಂಸ್ಥೆ ಡಿ.ಐ.ಸಿ.ಜಿ.ಸಿ. (D.I.C.G.C.) ಒಂದೇ ಆಗಿರುವುದರಿಂದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಇಡುವ ನಿಮ್ಮ ಠೇವಣಾತಿಗಳು ಸುರಕ್ಷಿತ.

ಡಾ|| ಶ್ರೀ ಶಾಮನೂರು ಶಿವಶಂಕರಪ್ಪ, ಗೌರವಾಧ್ಯಕ್ಷರು — ಶ್ರೀ ಕೋಗುಂಡಿ ಬಕ್ಕೇಶ್, ಅಧ್ಯಕ್ಷರು — ಶ್ರೀ ಎನ್.ಎ. ಮುರುಗೇಶ್, ಕಾರ್ಯದರ್ಶಿಗಳು


## ವಾಹಿನಿಯ ನೇರ ಪ್ರಸಾರಕ್ಕೆ ತಡೆ ವರದಿಗಾರರ ಕೂಟ ಪ್ರತಿಭಟನೆ



ದಾವಣಗೆರೆ, ಸೆ.30- ಪವರ್ ಟಿವಿ ನೇರ ಪ್ರಸಾರವನ್ನು ನಿರ್ಬಂಧಿಸಿರುವ ಸರ್ಕಾರದ ಕ್ರಮವನ್ನು ಖಂಡಿಸಿ, ವರದಿಗಾರರ ಕೂಟದ ನೇತೃತ್ವದಲ್ಲಿ ಪತ್ರಕರ್ತರು ನಗರದಲ್ಲಿ ಇಂದು ಸಂಜೆ ಪ್ರತಿಭಟನೆ ನಡೆಸಿದರು. ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ್ದ ಪತ್ರಕರ್ತರು ಮಾಧ್ಯಮ ಸ್ವಾತಂತ್ರ್ಯ ಹತ್ತಿಕ್ಕುತ್ತಿರುವುದನ್ನು ಖಂಡಿಸಿದರು. ನಂತರ ಉಪವಿಭಾಗಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ಪವರ್ ಟಿವಿ ವಾಹಿನಿಯ ಲೈವ್ ಬಂದ್ ಮಾಡುವುದರಿಂದ ಅದನ್ನು ಅವಲಂಬಿಸಿರುವ ನೂರಾರು ಪತ್ರಕರ್ತರ ಕುಟುಂಬಗಳು ಬೀದಿಗೆ ಬರುತ್ತವೆ. ಕಾರಣ, ಲೈವ್‌ಗೆ ಅವಕಾಶ ಕಲ್ಪಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಕೂಟದ ಮಾಜಿ ಅಧ್ಯಕ್ಷ ಬಸವರಾಜ್ ದೊಡ್ಮನಿ ಮಾತನಾಡಿದರು. ಕೂಟದ ಸಂಸ್ಥಾಪಕ ಅಧ್ಯಕ್ಷ ಕೆ. ಏಕಾಂತಪ್ಪ, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಾಡಜ್ಜಿ, ಖಜಾಂಚಿ ನಂದಕುಮಾರ್, ವಿವೇಕ್, ರವಿಬಾಬು, ಲೋಕೇಶ್, ರಾಮಪ್ರಸಾದ್, ಮಲ್ಲಿಕಾರ್ಜುನ ಕೈದಾಳ್, ಮಧು ನಾಗರಾಜ್ ಕುಂದುವಾಡ, ಯೋಗರಾಜ್, ಪುನೀತ್ ಆಪ್ತಿ, ಮಂಜು, ರವಿ, ಅಶೋಕ್, ರಾಮು, ಮಹಾದೇವ, ವೀರೇಶ್, ವಿಜಯ್, ಹನುಮಂತು ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.


**ಹೃದಯಪೂರ್ವಕ ಅಭಿನಂದನೆಗಳು**



ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ಇದರ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ದಕ್ಷ, ಪ್ರಾಮಾಣಿಕ, ಯುವ ಸಹಕಾರಿ ಧುರೀಣರೂ, ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನ ಅಧ್ಯಕ್ಷರೂ, ನಮ್ಮ ಆತ್ಮೀಯರೂ ಆದ

**ಶ್ರೀ ಎನ್.ಎ. ಮುರುಗೇಶ್**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

- ♦ ಕಂಬಳಿ ನಿಜಗುಣ ಶಿವಯೋಗಿ, ಕಂಬಳಿ ರುದ್ರಮುನಿ ಹಾಗೂ ಕುಟುಂಬದವರು.
- ♦ ಕಂಬಳಿ ಹಾಲಸ್ವಾಮಿ ♦ ಎ.ಬಿ.ಗುರುರಾಜ್
- ♦ ಜಿ.ಎಸ್.ರುದ್ರೇಶ್ ವಡ್ನಾಳು




## ದಾವಣಗೆರೆ ತೊಗಟವೀರದಲ್ಲಿ ಭಾರಿ ರಿಯಾಯಿತಿ ಮಾರಾಟ

**ಸೂಚನೆ :** ಕಳೆದ ಕರೋನಾ ಮಹಾಮರಿ ಕಾರಣದಿಂದ ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಶಾಪಿಂಗ್ ಟ್ರೆಂಡ್ ಹೆಚ್ಚಾಗಿದ್ದರಿಂದ ಸ್ಥಳೀಯ ಬಟ್ಟೆ ವ್ಯಾಪಾರಿಗಳು ಫ್ಯಾಕ್ಟರಿಗಳಿಂದ ಅತೀ ಕಡಿಮೆ ಪ್ರಮಾಣದ ಬಟ್ಟೆಗಳನ್ನು ಖರೀದಿಸುತ್ತಿದ್ದಾರೆ. ಇದರ ಫಲವಾಗಿ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸರಕುಗಳು ಫ್ಯಾಕ್ಟರಿಯಲ್ಲಿಯೇ ಶೇಖರಿಸಲ್ಪಟ್ಟಿವೆ. ಫ್ಯಾಕ್ಟರಿಯಲ್ಲಿನ ಎಲ್ಲಾ ಲೇಟೆಸ್ಟ್ ಫ್ಯಾಶನ್ ಬಟ್ಟೆಗಳು, ಲೇಡಿಸ್, ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳು ಈಗ ಕೇವಲ **200/-** ರಿಂದ **350/-** ರೂಪಾಯಿಗಳಲ್ಲಿ

**ಇಡೀ ದೇಶದ ಗಾರ್ಮೆಂಟ್ಸ್ ಸಿದ್ಧಪಡಿಸುವ ಕಂಪನಿಗಳ ಐತಿಹಾಸಿಕ ನಿರ್ಣಯ**

**ಹೋಲ್‌ಸೇಲರ್ಸ್, ಸೆಮಿ ಹೋಲ್‌ಸೇಲರ್ಸ್, ಕಮಿಷನ್ ಏಜೆಂಟ್ಸ್ ಮತ್ತು ರಿಟೇಲ್ ಮಾರಾಟಗಾರರ ಭಾರಿ ಲಾಭ ಮುಗಿಯಿತು. ಈಗ ಲಾಭವು ನೇರವಾಗಿ ರಿಟೇಲ್ ಗ್ರಾಹಕರಿಗೆ**

ಸಾವಿರಾರು ವಿವಿಧ ಪ್ರಕಾರ ಲೇಡೀಸ್ ಮತ್ತು ಜೆಂಟ್ಸ್, ಕಿಡ್ಸ್ ಬ್ರ್ಯಾಂಡೆಡ್ ಗಾರ್ಮೆಂಟ್ಸ್ ಶರ್ಟ್ಸ್, ಟೀ-ಶರ್ಟ್ಸ್, ಪ್ಯಾಂಟ್, ಲೋವೇರ್, ಬರ್ಮಡಾ, ಲೇಡಿಸ್ ಟಾಪ್, ಲೇಡಿಸ್ ಪ್ಯಾಂಟ್, ವೆಸ್ಟರ್ನ್ ಟಾಪ್, ಕುರ್ತಿ, ಲೇಡಿಸ್ ಪೈಜಾಮ್, ಪ್ಲಾಜೊ, ಲೋವರ್ ಇತ್ಯಾದಿ.




**ರಿಯಾಯಿತಿ ಕಡಿತಗೊಳಿಸಿದ ನಂತರ ರೂ.200/- ರಿಂದ 350/-**

ಸೂಚನೆ : ಕಂಪನಿ ಪಾಲಿಸಿಗಳ ಪ್ರಕಾರ ಬ್ರ್ಯಾಂಡ್‌ಗಳ ಹೆಸರನ್ನು ನಮೂದಿಸಲು ನಮಗೆ ನಿರ್ಬಂಧವಿದೆ. ಈ ಅಗ್ಗದ ದರದಲ್ಲಿ ಅಂತಹ ಬ್ರ್ಯಾಂಡ್‌ಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುತ್ತದೆ.

**ವಿಶೇಷ ಕೌಂಟರ್ :** ಜಂಟ್ಸ್ ಬ್ರಾಂಡೆಡ್ ಪ್ಯಾಂಟ್, ಸಿಲ್ಕೀ ಕಾಟನ್, ಮಸ್ಸರೈಸ್ ಕಾಟನ್, ಡೆನಿಮ್, ಶರ್ಟ್ಸ್, ಆಫೀಸ್‌ವೇರ್ ಶರ್ಟ್ಸ್, ಪಾರ್ಟಿವೇರ್‌ಶರ್ಟ್ಸ್, ಫಾರ್ಮಲ್ ಶರ್ಟ್ಸ್, ಟೀ-ಶರ್ಟ್ಸ್, ಜಂಟ್ಸ್ ಲೋವರ್, ಕಾಟನ್ ಟ್ರೌಜರ್ಸ್, ಜೀನ್ಸ್ ಮಲ್ಟಿಬ್ರ್ಯಾಂಡ್ ಡಿಸೈನರ್ ಕುರ್ತಿ, ಪಾರ್ಟಿವೇರ್ ಕುರ್ತಿ, ಇತ್ಯಾದಿ ರೂ.**450/-** ರಿಂದ **599/-**

**MRP 200, 250, 300 ರೂ. ಬ್ರ್ಯಾಂಡೆಡ್ ಬ್ರಾ & ಪ್ಯಾಂಟೀಸ್ ಕೇವಲ 50/-**




ಕಾಟನ್ ಚಿಕನ್ ಬ್ರಾ
ಸ್ಟ್ರೆಚಬಲ್ ಬ್ರಾ
ಅಲ್ಟ್ರಾ ಮಾಡೆಲ್ ಬ್ರಾ
ಮಿಸ್‌ವರ್ಲ್ಡ್ ಬ್ರಾ
ಇಂಪೋರ್ಟೆಡ್ ಬ್ರಾ
ಸ್ಪೋರ್ಟ್ಸ್ ಬ್ರಾ

ಸಿಲ್ಕ್ ಪ್ಯಾಂಟೀಸ್
ಪ್ರಿಂಟೆಡ್ ಕಾಟನ್ ಪ್ಯಾಂಟಿಸ್
ಅಲ್ಟ್ರಾ ಮಾಡೆಲ್ ಪ್ಯಾಂಟಿಸ್
ಇಂಪೋರ್ಟೆಡ್ ಪ್ಯಾಂಟಿಸ್

**ಕೇವಲ ರೂ.50/-**

**ನೇರವಾಗಿ ಸೀರೆ ಮಿಲ್ ಮುಖಾಂತರ ರೀಟೆಲ್ ಗ್ರಾಹಕರಿಗೆ**



- * ಕಾಟನ್ ಪ್ರಿಂಟ್ ಸೀರೆ
- * ಜಾರ್ಜೆಟ್ ಪ್ರಿಂಟೆಡ್ ಸೀರೆ
- * ಶಿಫಾನ್ ಸೀರೆ * ಇಟಾಲಿಯನ್ ಕ್ರೇಪ್ ಸೀರೆ
- * ಪಾರ್ಟಿವೇರ್ ಸೀರೆ * ಲೈಟ್‌ವೇಟ್ ಸೀರೆ
- * ರಿಚ್ ಪಲ್ಲು ಸೀರೆ

ಸಾವಿರಾರು ಬಗೆಯ ಫ್ಯಾನ್ಸಿ, ಕಾಟನ್ ಮತ್ತು ಸಿಲ್ಕ್ ಸೀರೆ ಕೇವಲ ರೂ.**150/-** ರಿಂದ **250/-** ಮಾತ್ರ

**ಸೇಲ್ 4 ದಿನಗಳು ಮಾತ್ರ 01, 02, 03 ಮತ್ತು 04ನೇ ಅಕ್ಟೋಬರ್**

ಸಮಯ : ಬೆಳಿಗ್ಗೆ 10 ರಿಂದ ರಾತ್ರಿ 9 ರವರೆಗೆ **No Lunch Break**

## ತೊಗಟವೀರ ಸಮುದಾಯ ಭವನ

# 2257, 6ನೇ ಮುಖ್ಯ ರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ

Customer Care No. : 77957 10735 ಸೇಲ್ಸ್ ಬಾಯ್ಸ್ / ಗರ್ಲ್ಸ್ ಬೇಕಾಗಿದ್ದಾರೆ.

All Major Debit / Credit Cards, Google Pay, Phone Pe Accepted

ಸೂಚನೆ : ಸರಕಾರದಿಂದ ನಿರ್ದೇಶಿಸಲಾದ ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಡ್ಡಾಯ !



## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಸದಸ್ಯರಿಗೆ ಸಂತೋಷದ ಸುದ್ದಿ – ಸಾಲಗಳ ಮೇಲಿನ ಬಡ್ಡಿ ದರ ಇಳಿಕೆ**

ಬ್ಯಾಂಕಿನಿಂದ ಸದಸ್ಯರಿಗೆ ಕೊಡುವ ವಿವಿಧ ಸಾಲಗಳ ಮೇಲಿನ ಬಡ್ಡಿ ದರಗಳನ್ನು ದಿನಾಂಕ 01.10.2020ರಿಂದ ಅನ್ವಯವಾಗುವಂತೆ ಈ ಕೆಳಕಂಡಂತೆ ಕಡಿಮೆ ಮಾಡಿ ಜಾರಿಗೊಳಿಸಲಾಗಿದೆ.

| ವಿವರಗಳು | ಬಡ್ಡಿದರ |
|---|---|
| 1) ನೂತನ ಗೃಹ ನಿರ್ಮಾಣ ಮತ್ತು ಗೃಹ ಖರೀದಿ ಸಾಲ | 9% |
| 2) ವಾಹನ ಸಾಲ (ಸೆಕೆಂಡ್ ಹ್ಯಾಂಡ್ ಮತ್ತು ವಾಣಿಜ್ಯೋಪಯೋಗಿ ವಾಹನಗಳ ಹೊರತುಪಡಿಸಿ) | 9% |
| 3) ಬಂಗಾರ ಆಭರಣ ಸಾಲ | 9% |

ಮಾನ್ಯ ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳಲು ವಿನಂತಿಸಿದೆ.

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು — ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು — ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು

## ದೇವರಗುಡ್ಡ : ಮಾಲತೇಶ ದೇವರ ದರ್ಶನಕ್ಕೆ ಇಂದಿನಿಂದ ಅವಕಾಶ



ರಾಣೇಬೆನ್ನೂರು ತಾಲ್ಲೂಕಿನ ಸುಕ್ಷೇತ್ರ ದೇವರಗುಡ್ಡದ ಶ್ರೀ ಮಾಲತೇಶ ದೇವರ ದರ್ಶನಕ್ಕೆ ಸಾರ್ವಜನಿಕರಿಗೆ ಇಂದಿನಿಂದ ಅವಕಾಶ ಕಲ್ಪಿಸಲಾಗಿದೆ ಎಂದು ದೇವಸ್ಥಾನದ ಪ್ರಧಾನ ಅರ್ಚಕ ಸಂತೋಷ ಭಟ್ ಪೂಜಾರ್ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಲಾಕ್‌ಡೌನ್‌ನಿಂದಾಗಿ ಸರ್ಕಾರ ನೀಡಿದ ಆದೇಶದ ಪ್ರಕಾರ ಸಾರ್ವಜನಿಕರಿಗೆ ದೇವರ ದರ್ಶನಕ್ಕೆ ಅವಕಾಶ ನೀಡಿರಲಿಲ್ಲ. ಈ ಕುರಿತು ದೇವಸ್ಥಾನ ಕಮಿಟಿ ವತಿಯಿಂದ ನಿನ್ನೆ ನಡೆದ ಸಭೆಯಲ್ಲಿ ಇಂದಿನಿಂದ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಭಕ್ತಾದಿಗಳು ಕಡ್ಡಾಯವಾಗಿ ಮಾಸ್ಕ್ ಹಾಗೂ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ದೇವಸ್ಥಾನಕ್ಕೆ ಬರುವವರು ಹೂವು, ಹಣ್ಣು, ಕಾಯಿ ಸೇರಿದಂತೆ ಯಾವುದೇ ಪೂಜಾ ಸಾಮಗ್ರಿಗಳನ್ನು ತರುವಂತಿಲ್ಲ. ದೇವಸ್ಥಾನದಲ್ಲಿ ಗೊರವಯ್ಯನವರ ಸೇವೆ, ದಿವಟಿಗಿ ಸೇವೆ ಹಾಗೂ ದೋಣಿ ಸೇವೆಗಳಿಗೆ ಅವಕಾಶವಿರುವುದಿಲ್ಲ. ದೇವರಿಗೆ ಯಾವುದೇ ಅಭಿಷೇಕ ಹಾಗೂ ಇನ್ನಿತರೆ ಸೇವೆಗಳನ್ನು ನಿಷೇಧಿಸಲಾಗಿದ್ದು, ಜನರಿಗೆ ಮಾಲತೇಶ ದೇವರ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ದೇವಸ್ಥಾನದಲ್ಲಿ ಯಾವುದೇ ರೀತಿಯ ವಸತಿ ಸೌಲಭ್ಯಗಳು ಇರುವುದಿಲ್ಲ ಎಂದು ತಿಳಿಸಿದ್ದಾರೆ.

## ಕೊಮಾರನಹಳ್ಳಿ ಕೆರೆಯ ಮೂಲ ಸರಿಪಡಿಸಲು ಸೂಚನೆ



ಮಲೇಬೆನ್ನೂರು, ಸೆ.30- ಕೊಮಾರನಹಳ್ಳಿಯ ಐತಿಹಾಸಿಕ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಕೆರೆಗೆ ಪ್ರಮುಖ ನೀರಿನ ಮೂಲವಾಗಿದ್ದ ಗುಡ್ಡಗಾಡಿನಲ್ಲಿನ 'ಹಾಲುವತ್ತಿ ಸರ' ಹಳ್ಳದ ಒಡ್ಡನ್ನು ಕಳೆದ 25 ವರ್ಷಗಳ ಹಿಂದೆ ಕೆಲವರು ಒಡೆದು ನೀರನ್ನು ಬೇರೆ ಕಡೆ ತಿರುಗಿಸಿದ್ದರು.

ಈ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದ ತಕ್ಷಣ ಸ್ಪಂದಿಸಿದ ಜಿಲ್ಲಾ ಪಂಚಾಯ್ತಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಅವರು ಜಿ.ಪಂ. ಇಂಜಿನಿಯರ್ ಸೋಮಾನಾಯ್ಕ, ಉಪತಹಶೀಲ್ದಾರ್ ಆರ್. ರವಿ, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಹಾಗೂ ರೈತರೊಂದಿಗೆ ಹಾಲುವತ್ತಿ ಸರ ವೀಕ್ಷಿಸಿದರು.

ಮೂಲಹಳ್ಳ ಮತ್ತೆ ಕೆರೆಗೆ ಹರಿಯುವಂತೆ ಮಾಡಲು ತಕ್ಷಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಿ ಎಂದು ವಾಗೀಶ್‌ಸ್ವಾಮಿ ಅವರು ಅಧಿಕಾರಿಗಳಿಗೆ ಸೂಚಿಸಿದರು. ಮಳೆಗಾಲದಲ್ಲಿ ಕೊಮಾರನಹಳ್ಳಿ ಕೆರೆ ಸೇರಬೇಕಾಗಿದ್ದ ಮಳೆ ನೀರು ಕೊಪ್ಪದ ಹಳ್ಳದ ಪಾಲಾಗುತ್ತಿರುವುದನ್ನು ರೈತರು ಜಿ.ಪಂ. ಸದಸ್ಯರ ಗಮನಕ್ಕೆ ತಂದರು.

## ಯುಪಿಎಸ್‌ಸಿ ಪರೀಕ್ಷೆ ಮುಂದೂಡಲು ಸುಪ್ರೀಂ ನಕಾರ

ನವದೆಹಲಿ, ಸೆ. 30 – ಬರುವ ಅಕ್ಟೋಬರ್ 4ರಂದು ನಡೆಯಲಿರುವ ಯುಪಿಎಸ್‌ಸಿ ಪರೀಕ್ಷೆಗಳನ್ನು ಮುಂದೂಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಕೊರೊನಾ ಹಾಗೂ ಪ್ರವಾಹಗಳ ಹಿನ್ನೆಲೆಯಲ್ಲಿ ಪರೀಕ್ಷೆ ಮುಂದೂಡಬೇಕೆಂದು ಅರ್ಜಿ ದಾಖಲಿಸಲಾಗಿತ್ತು. ಕೊರೊನಾ ಕಾರಣದಿಂದಾಗಿ ಈ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದೇ ಇರುವವರಿಗೆ ಮತ್ತೊಂದು ಅವಕಾಶ ನೀಡುವ ಬಗ್ಗೆ ಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.

ಈ ವರ್ಷ ಹಾಗು ಮುಂದಿನ ವರ್ಷದ ಪರೀಕ್ಷೆಗಳನ್ನು ಸೇರಿಸಿ 2021ರಲ್ಲೇ ಪರೀಕ್ಷೆ ನಡೆಸಬೇಕು ಎಂಬ ಮನವಿಯನ್ನೂ ನ್ಯಾಯಾಲಯ ತಳ್ಳಿ ಹಾಕಿದೆ.

## ಜೀವಿತ ದೃಢೀಕರಣ ದಾಖಲೆ ಒದಗಿಸಲು ಸೂಚನೆ

ದಾವಣಗೆರೆ, ಸೆ.30- ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ರಾಜ್ಯ/ಗೋವಾ ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನ/ಕುಟುಂಬ ಪಿಂಚಣಿಯನ್ನು ಪಾವತಿಸಲು ಪಿಂಚಣಿದಾರರು ಜೀವಿತ ಇರುವ ಬಗ್ಗೆ ದೃಢೀಕರಿಸಲು ಬ್ಯಾಂಕ್ ಅಕೌಂಟ್ ನಂಬರ್, ಪಿಪಿಓ ಪುಸ್ತಕ, ಆಧಾರ್ ಕಾರ್ಡ್ ಮತ್ತು ಭಾವಚಿತ್ರದೊಂದಿಗೆ ಅಕ್ಟೋಬರ್ 3 ರೊಳಗಾಗಿ ತಹಶೀಲ್ದಾರ್‌ರವರ ಕಚೇರಿ, ದಾವಣಗೆರೆ ಇಲ್ಲಿಗೆ ದಾಖಲೆಗಳನ್ನು ಸಲ್ಲಿಸಬೇಕೆಂದು ದಾವಣಗೆರೆ ತಹಶೀಲ್ದಾರ್ ಗ್ರೇಡ್-2 ಅವರು ತಿಳಿಸಿದ್ದಾರೆ.

# ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಶಕ್ತಿ ಕೊಡಲು ಸರ್ಕಾರಕ್ಕೆ ಮನವಿ



ಮಲೇಬೆನ್ನೂರು, ಸೆ.30- ಸತತವಾಗಿ ಭರ್ತಿಯಾಗಿರುವ ಮಧ್ಯ ಕರ್ನಾಟಕದ ಜನರ ಜೀವನಾಡಿ ಭದ್ರಾ ಜಲಾಶಯಕ್ಕೆ ಭದ್ರಾ ಅಚ್ಚುಕಟ್ಟು ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಕೊರೊನಾ ಮಹಾಮಾರಿಯಿಂದಾಗಿ ಈ ವರ್ಷ ರೈತರ ಅನುಪಸ್ಥಿತಿಯಲ್ಲಿ ಮಹಾಮಂಡಳದ ಪದಾಧಿಕಾರಿಗಳು ಮಾತ್ರ ಭದ್ರೆಗೆ ಬಾಗಿನ ಅರ್ಪಿಸಿದ್ದೇವೆ.

ಭದ್ರೆ ಪ್ರತಿವರ್ಷ ಭರ್ತಿಯಾಗಲಿ. ಅಚ್ಚುಕಟ್ಟಿನ ರೈತರ ಬದುಕು ಬಂಗಾರವಾಗಲಿ ಎಂದು ಶುಭ ಹಾರೈಸಿದರು. ನೀರು ಬಳಕೆದಾರರ ಸಹಕಾರ ಸಂಘಗಳಿಗೆ ರಾಜ್ಯ ಸರ್ಕಾರ ಹೆಚ್ಚಿನ ಶಕ್ತಿ ನೀಡಬೇಕೆಂದು ದ್ಯಾವಪ್ಪರೆಡ್ಡಿ ಒತ್ತಾಯಿಸಿದರು.

ಮಹಾಮಂಡಳದ ಉಪಾಧ್ಯಕ್ಷ ಎ. ಶ್ರೀನಿವಾಸ್ ಮಾತನಾಡಿ, ರೈತರ ಹೊಲ ಗಾಲುವೆಗಳನ್ನು ಆಧುನೀಕರಣಗೊಳಿಸಲು ಸರ್ಕಾರ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಅನುದಾನ ನೀಡಬೇಕೆಂದರು.

ಮಹಾಮಂಡಳದ ನಿರ್ದೇಶಕರೂ ಆದ ದಾವಣಗೆರೆ ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್ ಮಾತನಾಡಿ, ಅಪ್ಪರ್ ಭದ್ರಾ ಯೋಜನೆಗೆ ಭದ್ರಾ ಡ್ಯಾಂನಿಂದ ನೀರು ಹರಿಸುವ ಮೊದಲು ತುಂಗಾದಿಂದ ನೀರು ಹರಿಸುವ ಯೋಜನೆಯನ್ನು ಜಾರಿಗೊಳಿಸಬೇಕೆಂದರು.

ಮಹಾಮಂಡಳದ ನಿರ್ದೇಶಕರಾದ ಹೆಚ್. ಚಂದ್ರಪ್ಪ, ಹನುಮಂತರೆಡ್ಡಿ, ಎ.ಬಿ. ಕರಿಬಸಪ್ಪ, ಬಿ. ದೇವೇಂದ್ರಪ್ಪ, ಹೊನ್ನಾಳಿಯ ಹರೀಶ್, ಗೋಪನಾಳ್ ಬಂಧು, ಗೋಣಿವಾಡದ ಹಾಲೇಶ್, ಮಹಾಮಂಡಳದ ಸಿಇಓ ವೀರಪ್ಪ ಮತ್ತಿತರರು ಭಾಗವಹಿಸಿದ್ದರು.

## ಪ್ರಸಕ್ತ ಹಣಕಾಸು ವರ್ಷದಲ್ಲಿ 4.34 ಲಕ್ಷ ಕೋಟಿ ರೂ. ಸಾಲ

ನವದೆಹಲಿ ಸೆ. 30 – ಕೇಂದ್ರ ಸರ್ಕಾರ ಪ್ರಸಕ್ತ ಹಣಕಾಸು ವರ್ಷದ 2ನೇ ಅವಧಿಯಲ್ಲಿ 4.34 ಲಕ್ಷ ಕೋಟಿ ರೂ.ಗಳ ಸಾಲ ಮಾಡಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ 12 ಲಕ್ಷ ಕೋಟಿ ರೂ. ಸಾಲದ ಗುರಿಗೆ ಅಂಟಿಕೊಳ್ಳಲಾಗುವುದು ಎಂದು ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ತರುಣ್ ಬಜಾಜ್ ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಅಂತ್ಯವಾದ ಪ್ರಥಮಾರ್ಧದಲ್ಲಿ ಸರ್ಕಾರ 7.66 ಲಕ್ಷ ಕೋಟಿ ರೂ.ಗಳ ಸಾಲ ಮಾಡಿದೆ. ಎರಡನೇ ಅವಧಿಯಲ್ಲಿ 4.34 ಲಕ್ಷ ಕೋಟಿ ರೂ. ಸಾಲ ಪಡೆಯಲಾಗುವುದು ಎಂದವರು ಹೇಳಿದ್ದಾರೆ.

## ಮೂಲಭೂತ ವಲಯದಲ್ಲಿ ಶೇ.8.5ರ ಕುಸಿತ

ನವದೆಹಲಿ, ಸೆ. 30 - ಆಗಸ್ಟ್ ತಿಂಗಳಲ್ಲಿ ಎಂಟು ಮೂಲಭೂತ ಸೌಲಭ್ಯಗಳ ವಲಯ ಶೇ.8.5ರಷ್ಟು ಕುಸಿತ ಕಂಡಿದೆ. ಸತತ ಆರನೇ ತಿಂಗಳು ಕುಸಿತ ಕಂಡುಬಂದಿದೆ.

ಆಗಸ್ಟ್ 2019ರಲ್ಲಿ ಎಂಟು ವಲಯಗಳು ಶೇ.0.2ರ ಕುಸಿತ ಕಂಡಿದ್ದವು. ಕಲ್ಲಿದ್ದಲು ಹಾಗೂ ರಸಗೊಬ್ಬರ ಹೊರತು ಪಡಿಸಿ ಉಳಿದ ವಲಯಗಳಾದ ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನ, ಉಕ್ಕು, ಸಿಮೆಂಟ್ ಹಾಗೂ ವಿದ್ಯುತ್ ವಲಯಗಳಲ್ಲಿ ಕುಸಿತವಾಗಿದೆ.

## ಸಸಿ ವಿತರಣೆ

ದಾವಣಗೆರೆ,ಸೆ.30- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಹೊಂಗೆ ಗಿಡಗಳನ್ನು ತಮ್ಮ ಮನೆಯ ಮುಂದೆ ಹಾಕಿಕೊಡಲಾಗುವುದು. ಸಸಿಗಳನ್ನು ನೆಟ್ಟು ಸಂರಕ್ಷಿಸಲಿಚ್ಛಿಸುವವರು 9538024422, 6363 151534 ರಲ್ಲಿ ಸಂಪರ್ಕಿಸಬಹುದು.

# ಮಹರ್ಷಿ ವಾಲ್ಮೀಕಿ ಆಶೋತ್ತರಗಳನ್ನು ಸಮಾಜಕ್ಕೆ ತಂದ ಡಾ. ಅಂಬೇಡ್ಕರ್

### ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ವಾಲ್ಮೀಕಿ ಗುರುಪೀಠದ ಶ್ರೀಗಳು



ರಾಣೇಬೆನ್ನೂರು, ಸೆ.30- ಮಹರ್ಷಿ ವಾಲ್ಮೀಕಿ ಬರೆದ ರಾಮಾಯಣದ ಆಶೋತ್ತರಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ಸಾಮಾಜಿಕ ವ್ಯವಸ್ಥೆಯಲ್ಲಿ ತಂದಿದ್ದಾರೆ ಎಂದು ರಾಜನಹಳ್ಳಿ ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಹೇಳಿದರು.

ಶ್ರೀಗಳು, ಇಲ್ಲಿನ ವಾಲ್ಮೀಕಿ ಭವನದ ಹೆಚ್ಚುವರಿ ಕಟ್ಟಡದ ಶಿಲಾನ್ಯಾಸ ಮಾಡಿ, ಆಶೀರ್ವಚನ ನೀಡಿದರು.

ಮಹಾತ್ಮರ ಬದುಕು ನಮಗೆ ಮಾರ್ಗದರ್ಶನ ನೀಡುತ್ತದೆ. ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರ ಆಚರಣೆಗಳು ಅವರ ಬದುಕಿನಲ್ಲಿವೆ. ಅವರ ಜಾತಿ ಆಚರಣೆ ಮೂಲಕ ಸಮಾಜದ ಆಶೋತ್ತರಗಳನ್ನು ಆಚರಣೆಯಲ್ಲಿ ತರಬೇಕು ಎಂದು ಶ್ರೀ ಗಳು ಕರೆ ನೀಡಿದರು.

ವಾಲ್ಮೀಕಿ ಭವನಕ್ಕೆ ನಗರಸಭೆಯಿಂದ ಅರ್ಧ ಎಕರೆ ಜಾಗ ಕೊಡಿಸುವಲ್ಲಿ ಬಹಳಷ್ಟು ಶ್ರಮ ವಹಿಸಿದ್ದ ಸಮಾಜದ ಮುಖಂಡ ಹಾಗೂ ನಗರಸಭೆ ಸದಸ್ಯ ಶಶಿಧರ ಬಸೇನಾಯ್ಕರ ಅವರನ್ನು ನಿರೂಪಕರು ತಡವಾಗಿ ವೇದಿಕೆಗೆ ಕರೆದರು. ಇದರಿಂದ ಬೇಸರಗೊಂಡ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೆ ಹೊರ ನಡೆದರು.

ಶಾಸಕ ಅರುಣಕುಮಾರ ಪೂಜಾರ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಜಿ.ಪಂ ಸದಸ್ಯ ಏಕನಾಥ ಭಾನುವಳ್ಳಿ, ತಾ.ಪಂ ಅಧ್ಯಕ್ಷೆ ಗೀತಾ ಲಮಾಣಿ, ಬಿಜೆಪಿ ಮುಖಂಡರಾದ ಮಂಜುನಾಥ ಓಲೇಕಾರ, ನಗರಸಭೆ ಸದಸ್ಯರಾದ ಪ್ರಕಾಶ ಪೂಜಾರ, ರಾಜು ಅಡ್ಮನಿ, ಗಂಗಮ್ಮ ಹಾವನೂರ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕೊರೊನಾ ಗೆದ್ದ ಮಾದಾರ ಚನ್ನಯ್ಯ ಶ್ರೀ




ಚಿತ್ರದುರ್ಗ, ಸೆ.30- ಕೊರೊನಾ ದೃಢಪಟ್ಟ ಹಿನ್ನೆಲೆಯಲ್ಲಿ ಕಳೆದ 15 ದಿನಗಳಿಂದ ಬೆಂಗಳೂರಿನ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ಶ್ರೀಮಠಕ್ಕೆ ವಾಪಸ್ಸಾದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ಶ್ರೀಗಳಿಗೆ ಹೂಗುಚ್ಛ ನೀಡಿ ಅಭಿನಂದಿಸಿ ಬೀಳ್ಕೊಟ್ಟರು.

ಸಂಜೆ ಶ್ರೀ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠಕ್ಕೆ ಆಗಮಿಸಿದ ಶ್ರೀಗಳನ್ನು ಮಠದ ಕಾರ್ಯಕರ್ತರು, ಭಕ್ತರು ಸಂಭ್ರಮದಿಂದ ಸ್ವಾಗತಿಸಿದರು.

## ಗಾಂಧಿ ಜಯಂತಿ : ನಾಳೆ ಮಾಂಸ ಮಾರಾಟ ನಿಷೇಧ

ದಾವಣಗೆರೆ, ಸೆ. 30- ಅಕ್ಟೋಬರ್ 2 ರಂದು ಗಾಂಧಿ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಆದ್ದರಿಂದ ಅಂದು ಮಾಂಸ ಮಾರಾಟ ಮಾಡಬಾರದು. ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆಯ ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ.

## ಬಾಬರಿ ತೀರ್ಪು ಸ್ವಾಗತಾರ್ಹ




ಬೆಂಗಳೂರು, ಸೆ. 30 - ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಬಂದಿರುವ ತೀರ್ಪು ಒಂದು ಐತಿಹಾಸಿಕ ತೀರ್ಪು. ಇದನ್ನು ಸ್ವಾಗತಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಹೋರಾಟಗಾರರಿಗೆ ಎಂದಿಗೂ ಹಿನ್ನಡೆಯಾಗುವುದಿಲ್ಲ. ಈ ಯಶಸ್ಸಿಗೆ ಅಡ್ವಾಣಿಯವರೇ ಕಾರಣ. ಎಲ್ಲಾ 32 ಆರೋಪಿಗಳನ್ನು ನಿರ್ದೋಷಿಗಳು ಎಂದು ತೀರ್ಪು ನೀಡಲಾಗಿದೆ. ಇಡೀ ಭಾರತವೇ ಒಪ್ಪುವಂತಹ ತೀರ್ಪು ಇದಾಗಿದೆ ಎಂದು ಹೇಳಿದರು.

ಅಂದು ಅಡ್ವಾಣಿಯವರು ನಡೆಸಿದ ಹೋರಾಟದ ಫಲವಾಗಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗುತ್ತಿದೆ. ಈ ತೀರ್ಪನ್ನು ನಾವು ಸ್ವಾಗತಿಸುತ್ತೇವೆ ಎಂದು ನುಡಿದರು.









## ಶೇ.109ರಷ್ಟು ಸುರಿದ ಮುಂಗಾರು

ನವದೆಹಲಿ, ಸೆ. 30 – ದೇಶದಲ್ಲಿ ಈ ವರ್ಷ ಮುಂಗಾರು ವಾಡಿಕೆಗಿಂತ ಹೆಚ್ಚಾಗಿದ್ದು, ಕಳೆದ 30 ವರ್ಷಗಳಲ್ಲಿ ಎರಡನೇ ಬಾರಿ ಇಷ್ಟೊಂದು ಮಳೆ ಸುರಿದಿದೆ.

ಈ ವರ್ಷ ದೀರ್ಘಾವಧಿ ಸರಾಸರಿಯ ಶೇ.109ರಷ್ಟು ಮಳೆ ಸುರಿದಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜೂನ್ ತಿಂಗಳಲ್ಲಿ ವಾಡಿಕೆ ಯ ಶೇ.107, ಆಗಸ್ಟ್‌ನಲ್ಲಿ ವಾಡಿಕೆಯ ಶೇ.127 ಹಾಗೂ ಸೆಪ್ಟೆಂಬರ್‌ನಲ್ಲಿ ವಾಡಿಕೆಯ ಶೇ.105ರಷ್ಟು ಮಳೆ ಸುರಿದಿದೆ. ಜುಲೈನಲ್ಲಿ ಮಾತ್ರ ವಾಡಿಕೆಯ ಶೇ.90ರಷ್ಟು ಮಳೆಯಾಗಿದೆ.

## ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ, ಸೆ. 30-ನೂತನ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಬ್ರಹ್ಮೋಸ್ ಅನ್ನು ಒಡಿಶಾದ ಬಾಲಸೋರ್‌ನಲ್ಲಿ ಯಶಸ್ವಿ ಯಾಗಿ ಪರೀಕ್ಷೆಗೆ ಒಳಪಡಿಸ ಲಾಗಿದೆ. ಈ ಕ್ಷಿಪಣಿ 400 ಕಿ.ಮೀ. ದೂರ ಸಿಡಿಯಬಲ್ಲುದಾಗಿದೆ. ಈ ಹಿಂದೆ ರೂಪಿಸಲಾಗಿದ್ದ ಕ್ಷಿಪಣಿ 290 ಕಿ.ಮೀ. ದೂರ ಸಿಡಿಯುವ ಸಾಮರ್ಥ್ಯ ಹೊಂದಿತ್ತು. ಹೊಸ ಸುಧಾರಿತ ಕ್ಷಿಪಣಿ 400 ಕಿಮೀ ದೂರ ಚಿಮ್ಮುವ ಸಾಮರ್ಥ್ಯ ಹೊಂದಿದೆ.









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte